**ಕರ್ನಾಟಕ ವಿಧಾನಸಭೆ**
**ಸೋಮವಾರ 24ನೇ ಜನವರಿ 2005ರಂದು**
**ಸದನವು ವಿಧಾನಸಭೆಯ ಸಭಾಂಗಣದಲ್ಲಿ**
**ಬೆಳಿಗ್ಗೆ 11 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು.**
**ಅಧ್ಯಕ್ಷರು (ಶ್ರೀ ಕೃಷ್ಣರವರು)**
**ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.**

## ಸಂತಾಪ ಸೂಚನೆ

**ಮಾನ್ಯ ಸಭಾಧ್ಯಕ್ಷರು:–**

ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್ ಸಂಗೀತ ವಿದುಷಿ ಭಾರತ ರತ್ನ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ, ಕರ್ನಾಟಕದ ಮಾಜಿ ಹಂಗಾಮಿ ರಾಜ್ಯಪಾಲರಾಗಿದ್ದ ಶತಾಯುಷಿ ಶ್ರೀ ನಿಟ್ಟೂರು ಶ್ರೀನಿವಾಸರಾವ್, ರಾಜ್ಯಸಭೆಯ ಮಾಜಿ ಸಚಿವರಾದ ಶ್ರೀ ಕೋಲೂರು ಮಲ್ಲಪ್ಪ, ಪ್ರಖ್ಯಾತ ಅಣುವಿಜ್ಞಾನಿ ಡಾ: ರಾಜರಾಮಣ್ಣ, ಮಾಜಿ ಸಚಿವರಾಗಿದ ಶ್ರೀ ಡಿ.ಎ. ಚಿಣ್ಣಪ್ಪ, ಶ್ರೀ ಸಾಗರನಹಳ್ಳಿ ರೇವಣ್ಣ, ಶ್ರೀ ಆರ್.ಡಿ. ಕಿತ್ತೂರು, ಮೈಸೂರು ಪ್ರಜಾ ಪ್ರತಿನಿಧಿಸಭೆಯ ಸದಸ್ಯರಾಗಿದ್ದ ಶ್ರೀಮತಿ ಅನ್ನಪೂರ್ಣಮ್ಮ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ (1) ಜೆ.ಎಸ್. ಅಮ್ಮಣ್ಣವರ್, (2) ಎಸ್.ಆರ್. ಲಕ್ಷ್ಮಯ್ಯ, (3) ಎ.ಎ. ದೇಸಾಯಿ, (4) ಎ.ಡಿ. ಬಿಳಿಗೌಡ, (5) ಗಂಗಾಭೋವಿ, (6) ಕೆ. ನಾರಾಯಣಪ್ಪ, (7) ಜಿ. ರಾಮದಾಸ್, (8) ಆರ್. ಕೆಂಚಪ್ಪ, ಸಾಹಿತಿ ಶ್ರೀ ಶಂಕರ ಮೊಕಾಶಿ ಪುಣೇಕರ ಹಾಗೂ ಸುನಾಮಿ ದುರಂತದಲ್ಲಿ ಸಹಸ್ರಾರು ಜನರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

### ಶ್ರೀ ಪಿ.ವಿ. ನರಸಿಂಹರಾವ್

ರಾಷ್ಟ್ರದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಪಿ.ವಿ. ನರಸಿಂಹರಾವ್ ಅವರು ಆಂಧ್ರ ಪ್ರದೇಶದ ಕರೀಂ ನಗರ ಜಿಲ್ಲೆಯ ವಂಗಾರದಲ್ಲಿ ದಿನಾಂಕ 28ನೇ ಜೂನ್, 1921ರಂದು ಜನಿಸಿದ್ದರು. ಆಂಧ್ರದಲ್ಲಿ ರಜಾಕರ ವಿರುದ್ಧ ಹೋರಾಟ ಸಂಘಟಿಸಿ, ಸ್ವಾತಂತ್ರ್ಯ ಹೋರಾಟದಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದ ಶ್ರೀಯುತರು ಆಂಧ್ರ ವಿಧಾನಸಭೆಯ ಶಾಸಕರಾಗಿ, ಆ ರಾಜ್ಯ ಸರ್ಕಾರದ ಹಲವಾರು ಖಾತೆಗಳ ಸಚಿವರಾಗಿ ನಂತರ ಮುಖ್ಯ ಮಂತ್ರಿಯಾಗಿಯೂ ಕಾರ್ಯನಿರ್ವಹಿಸಿದ್ದರು.

1977ರಲ್ಲಿ ಆರನೇ ಲೋಕಸಭೆಗೆ ಪ್ರಥಮ ಬಾರಿಗೆ ಚುನಾಯಿತರಾಗಿ ನಂತರ ಏಳು, ಎಂಟು, ಒಂಭತ್ತು, ಹತ್ತು ಹಾಗೂ ಹನ್ನೊಂದನೇ ಲೋಕಸಭೆಗೆ ಸತತವಾಗಿ ಆಯ್ಕೆಯಾಗಿ ಕೇಂದ್ರದ ವಿದೇಶಾಂಗ, ಗೃಹ, ಯೋಜನೆ, ರಕ್ಷಣೆ, ಮಾನವ ಸಂಪನ್ಮೂಲ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಸಚಿವರಾಗಿ, ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷರಾಗಿಯೂ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

1991ರ ಜೂನ್‌ನಲ್ಲಿ ಭಾರತದ ಪ್ರಧಾನ ಮಂತ್ರಿಗಳಾಗಿ ಆಯ್ಕೆಗೊಂಡು 1996ರ ಮೇ ವರೆಗೆ ಸಂಪೂರ್ಣ ಐದು ವರ್ಷಗಳವರೆಗೆ ಕಾರ್ಯನಿರ್ವಹಿಸಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ರಾಷ್ಟ್ರದ ಆರ್ಥಿಕ ಸ್ಥಿತಿಯ ಹರಿಕಾರರೆಂದು ಹೆಸರುಗಳಿಸಿದ್ದರು.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ, ಇನ್ನಿತರೆ ಹಲವಾರು ಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಜನಪರ ಸೇವೆಯನ್ನು ಮಾಡಿದ್ದರು.

ರಾಜಕಾರಣದ ಜೊತೆಗೆ ಓದು, ಬರಹ, ಸಂಗೀತ, ಸಾಹಿತ್ಯ, ನಾಟಕ, ಸಿನಿಮಾ ಎಂದು ತೊಡಗಿಸಿಕೊಂಡಿದ್ದ ರಾವ್ ಅವರು ಬಹುಮುಖ ಪ್ರತಿಭೆಯುಳ್ಳವರು. ಹದಿನೇಳು ಭಾಷೆಗಳನ್ನು ಬಲ್ಲವರಾಗಿದ್ದರು ಎಂಬುದು ಇವರ ಹೆಗ್ಗಳಿಕೆ. ಹಲವಾರು ಕೃತಿಗಳನ್ನು ರಚಿಸಿರುವರು ಹಾಗೂ ಭಾಷಾಂತರಿಸಿರುವರು. ರಾಷ್ಟ್ರ ಕಂಡ ಅತ್ಯಂತ ಸುಸಂಸ್ಕೃತ ವ್ಯಕ್ತಿ ಮತ್ತು ರಾಜಕೀಯ ಮುತ್ಸದ್ಧಿಯಾಗಿದ್ದರು.

ಶ್ರೀ ಪಿ.ವಿ. ನರಸಿಂಹರಾವ್ ಅವರು ದಿನಾಂಕ 23.12.2004ರಂದು ನಿಧನ ಹೊಂದಿದರು.

### ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ

ಭಾರತ ರತ್ನ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರು 1916ರಲ್ಲಿ ತಮಿಳುನಾಡಿನ ಮಧುರೈನಲ್ಲಿ ಜನಿಸಿದ್ದು, ತಮ್ಮ ಸುಮಧುರ ಕಂಠಶ್ರೀಯಿಂದ ಹಾಡಿದ ಸಾವಿರಾರು ಕೀರ್ತನೆಗಳು, ದೇವರನಾಮಗಳು, ಮೀರಾ ಭಜನೆಗಳು ದೇಶ ವಿದೇಶಗಳ ಕೋಟ್ಯಾಂತರ ಜನರ ಮನಗೆದ್ದಿವೆ. ಕರ್ನಾಟಕ ಸಂಗೀತಕ್ಕೆ ಮಹೋನ್ನತ ಮೆರುಗು ನೀಡಿದ ಶ್ರೀಮತಿ ಸುಬ್ಬುಲಕ್ಷ್ಮಿ ಅವರಿಗೆ ಕೇಂದ್ರ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, ಮ್ಯಾಗ್ಸೆಸೆ ಪ್ರಶಸ್ತಿ, ಹಫೀಜ್ ಅಲಿಖಾನ್ ಪ್ರಶಸ್ತಿಗಳಲ್ಲದೆ, ಪ್ರತಿಷ್ಠಿತ ಸಂಘ ಸಂಸ್ಥೆಗಳ ಸದಸ್ಯತ್ವ, ಹಲವಾರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು ಲಭಿಸಿದ್ದವು.

ಸಂಗೀತವೇ ತಮ್ಮ ಉಸಿರಾಗಿ ಸಾಧನೆ ಮಾಡಿದ್ದ ಇವರಿಗೆ, ಭಾರತ ಸರ್ಕಾರವು ಪ್ರತಿಷ್ಠಿತ "ಭಾರತ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರು ದಿನಾಂಕ 11.12.2004ರಂದು ನಿಧನ ಹೊಂದಿದರು.

### ಶ್ರೀ ನಿಟ್ಟೂರು ಶ್ರೀನಿವಾಸರಾವ್

ಮಾಜಿ ಹಂಗಾಮಿ ರಾಜ್ಯಪಾಲರಾಗಿದ್ದ, ಶತಾಯುಷಿ, ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು ದಿನಾಂಕ 24.08.1903ರಂದು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಜನಿಸಿದ್ದರು. ಅಪ್ರತಿಮ ಹಿರಿಯ ಚಿಂತಕ, ಸಾಹಿತ್ಯಪ್ರಿಯ ಮತ್ತು ಹೋರಾಟಗಾರರು. ಮಹಾತ್ಮ ಗಾಂಧೀಜಿ ಹಾಗೂ ಗೋಪಾಲಕೃಷ್ಣ ಗೋಖಲೆ ಅವರ ಪ್ರಭಾವಕ್ಕೆ ಒಳಗಾಗಿ ವಿದ್ಯಾರ್ಥಿದೆಸೆಯಲ್ಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ರಾಜ್ಯ ಹಾಗೂ ಕೇಂದ್ರದಲ್ಲಿ ಹಲವಾರು ಶ್ರೇಷ್ಟ ಹುದ್ದೆಗಳನ್ನು ಅಲಂಕರಿಸಿ ಅತ್ಯಂತ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿದ್ದ ಶ್ರೀಯುತರು 196lರಲ್ಲಿ ಮೈಸೂರು ಉಚ್ಚನ್ಯಾಯಾಲಯದಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಸತ್ಯಶೋಧನಾ ಪ್ರಕಟಣಾ ಸಂಸ್ಥೆಯನ್ನು ಪ್ರಾರಂಭಿಸಿ ಮಹಾತ್ಮ ಗಾಂಧೀಜಿಯವರ ಆತ್ಮಕಥನವನ್ನು ಸ್ವತಃ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿರುವುದಲ್ಲದೆ, ಹಲವಾರು ಗಣ್ಯರ ಕೃತಿಗಳನ್ನು ಪ್ರಕಟಸಿದ್ದಾರೆ. ಕರ್ನಾಟಕದ ಹಂಗಾಮಿ ರಾಜ್ಯಪಾಲರಾಗಿ ಸ್ವಲ್ಪ ಕಾಲ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಅಪಾರ ದೇಶಭಕ್ತಿ ಉಳ್ಳವರಾಗಿದ್ದರು. ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಇವರ ಕೊಡುಗೆ ಅಪಾರವಾದದ್ದು. ಜನಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಶ್ರೀಯುತರು ಒಂದು ಶತಮಾನದ ಸಾಂಸ್ಕೃತಿಕ ಬದುಕಿಗೆ ಸಾಕ್ಷಿಯಾಗಿದ್ದರು.

ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರು ದಿನಾಂಕ 12.08.2004ರಂದು ನಿಧನ ಹೊಂದಿದರು.

### ಶ್ರೀ ಕೋಲೂರು ಮಲ್ಲಪ್ಪ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ರಾಜ್ಯಸಭೆ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ, ಗಾಂಧಿವಾದಿ ಶ್ರೀ ಕೋಲೂರು ಮಲ್ಲಪ್ಪ ಅವರು ಯಾದಗಿರಿ ತಾಲ್ಲೂಕಿನಲ್ಲಿ ಜನಿಸಿದ್ದು, ಗಾಂಧೀಜಿ ಅವರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಕೈಗೊಂಡು ಹಲವಾರು ಬಾರಿ ಸೆರೆಮನೆವಾಸವನ್ನು ಅನುಭವಿಸಿದ್ದರು. ಹೈದರಾಬಾದಿನ ನಿಜಾಮರ ವಿರುದ್ಧ ಇವರು ಕೈಗೊಂಡಿದ್ದ ಹೋರಾಟ ಅವಿಸ್ಮರಣೀಯವಾದುದು. ಕುಷ್ಠರೋಗದ ನಿರ್ಮೂಲನೆಗೆ ಆದ್ಯತೆ ನೀಡಿದ್ದ ಶ್ರೀಯುತರು ಕುಷ್ಠರೋಗಿಗಳಿಗೆ ಉತ್ತಮ ಬದುಕನ್ನು ನೀಡಲು ಜನತಾ ಟ್ರಸ್ಟ್ ಎಂಬ ಸ್ವಯಂ ಸೇವಾ ಸಂಘವನ್ನು ಪ್ರಾರಂಭಿಸಿದ್ದರು. ಆಚಾರ್ಯ ವಿನೋಬಾ ಭಾವೆ ಅವರ ಭೂದಾನ ಚಳುವಳಿಯಲ್ಲಿಯೂ ಭಾಗವಹಿಸಿದ್ದರು.

1952ರಲ್ಲಿ ಸುರಪುರ ಕ್ಷೇತ್ರದಿಂದ ಹೈದರಾಬಾದ್ ಪ್ರಾಂತ್ಯದಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. 1957ರಲ್ಲಿ ಸೇಡಂ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾಗಿದ್ದರು. 1968, 1974 ಹಾಗೂ 1984ರಲ್ಲಿ ಮೂರು ಬಾರಿ ರಾಜ್ಯ ಸಭಾ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಕೋಲೂರು ಮಲ್ಲಪ್ಪ ಅವರು ದಿನಾಂಕ 24.10.2004ರಂದು ನಿಧನ ಹೊಂದಿದರು.

### ಡಾ॥ ರಾಜಾರಾಮಣ್ಣ

ರಾಷ್ಟ್ರದ ಖ್ಯಾತ ಅಣು ವಿಜ್ಞಾನಿ, ಮಾಜಿ ಕೇಂದ್ರ ಸಚಿವರಾಗಿದ್ದ ಡಾ॥ ರಾಜಾರಾಮಣ್ಣ ಅವರು ದಿನಾಂಕ 28.01.1925ರಂದು ತುಮಕೂರಿನಲ್ಲಿ ಜನಿಸಿದ್ದು, ಭಾರತ ಪ್ರಥಮ ಬಾರಿಗೆ ನಡೆಸಿದ ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ರಾಷ್ಟ್ರದ ವಿಜ್ಞಾನ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿದ್ದರು. ಎರಡು ಬಾರಿ ರಾಜ್ಯ ಸಭೆಯ ಸದಸ್ಯರಾಗಿದ್ದ ಶ್ರೀಯುತರು ಕೇಂದ್ರ ರಕ್ಷಣಾ ಖಾತೆಯ ರಾಜ್ಯ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

ತಮ್ಮ ಅಭೂತಪೂರ್ವ ಸಾಧನೆಗಾಗಿ ಭಾರತ ಸರ್ಕಾರದ ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಪ್ರಶಸ್ತಿಗಳನ್ನು ಪಡೆದಿದ್ದ ಶ್ರೀಯುತರು ಅಣ್ವಸ್ತ್ರ ಕ್ಷೇತ್ರದಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆಪಡುವಂತೆ ಕಾರ್ಯನಿರ್ವಹಿಸಿದ್ದರು.

ಡಾ॥ ರಾಜಾರಾಮಣ್ಣ ಅವರು ದಿನಾಂಕ 23.09.2004ರಂದು ನಿಧನ ಹೊಂದಿದರು.

### ಶ್ರೀ ಡಿ.ಎ. ಚಿಣ್ಣಪ್ಪ

ಮಾಜಿ ಸಚಿವರಾಗಿದ್ದ ಶ್ರೀ ಡಿ.ಎ. ಚಿಣ್ಣಪ್ಪ ಅವರು ದಿನಾಂಕ 11.04.1933ರಂದು ಕೊಡಗಿನ ಬಿಳಿಗೇರಿಯಲ್ಲಿ ಜನಿಸಿ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದರು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಮಂಡಳಿ ಅಧ್ಯಕ್ಷರಾಗಿ, ಭಾರತ ಸೇವಾದಳದ ಕೊಡಗು ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಎಂಟು ಹಾಗೂ ಒಂಭತ್ತನೇ ವಿಧಾನಸಭೆಗೆ ಚುನಾಯಿತರಾಗಿ 1992ರಿಂದ 1994ರವರೆಗೆ ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಖಾತೆಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀ ಡಿ.ಎ. ಚಿಣ್ಣಪ್ಪ ಅವರು ದಿನಾಂಕ 05.10.2004 ರಂದು ನಿಧನ ಹೊಂದಿದರು.

### ಶ್ರೀ ಸಾಗರನಹಳ್ಳಿ ರೇವಣ್ಣ

ಹಿರಿಯ ಗಾಂಧಿವಾದಿಗಳು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಸಾಗರನಹಳ್ಳಿ ರೇವಣ್ಣ ಅವರು ಸಾಗರನಹಳ್ಳಿಯಲ್ಲಿ ಜನಿಸಿದ್ದು ಸಹಕಾರ ರಂಗದ ಮೂಲಕ ಪ್ರಜಾಸೇವೆ ಕೈಗೊಂಡು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಂಡಳಿಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಗುಬ್ಬಿ ವಿಧಾನಸಭಾ ಕ್ಷೇತ್ರದಿಂದ ಏಳನೇ ವಿಧಾನಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು ಸಣ್ಣ ಉಳಿತಾಯ ಹಾಗೂ ಬಂದೀಖಾನೆ ಖಾತೆಯ ರಾಜ್ಯ ಸಚಿವರಾಗಿಯೂ ಸೇವೆಸಲ್ಲಿಸಿದ್ದರು.

ಶ್ರೀ ಸಾಗರನಹಳ್ಳಿ ರೇವಣ್ಣ ಅವರು ದಿನಾಂಕ 05.09.2004ರಂದು ನಿಧನ ಹೊಂದಿದರು.

### ಶ್ರೀ ಆರ್.ಡಿ. ಕಿತ್ತೂರ್

ಮಾಜಿ ಸಚಿವರಾಗಿದ್ದ ಶ್ರೀ ಆರ್.ಡಿ. ಕಿತ್ತೂರ್ ಅವರು ಸಮಾಜ ಸೇವೆಯಲ್ಲಿ ಹೆಸರುಗಳಿಸಿದ್ದು, 1972ರಲ್ಲಿ ಐದನೇ ವಿಧಾನಸಭೆಗೆ ಕಾಗವಾಡ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದು ಗೃಹಖಾತೆಯ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಆರ್.ಡಿ. ಕಿತ್ತೂರ್ ಅವರು ದಿನಾಂಕ 30.9.2004ರಂದು ನಿಧನ ಹೊಂದಿದರು.

### ಶ್ರೀಮತಿ ಅನ್ನಪೂರ್ಣಮ್ಮ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಅನ್ನಪೂರ್ಣಮ್ಮ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಾಹಿಸಿದ್ದು, ಕ್ವಿಟ್ ಇಂಡಿಯಾ ಚಳುವಳಿ, ಶಿವಪುರ ಧ್ವಜ ಸತ್ಯಾಗ್ರಹ, ವಿದುರಾಶ್ವತ್ಥ ಸತ್ಯಾಗ್ರಹ ಹಾಗೂ ಮೈಸೂರು ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ್ದರು. ಬೆಂಗಳೂರು ಪಾಲಿಕೆ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಇವರು 1945ರಿಂದ 1949ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಮತಿ ಅನ್ನಪೂರ್ಣಮ್ಮ ಅವರು ದಿನಾಂಕ 08.11.2004ರಂದು ನಿಧನ ಹೊಂದಿದರು.

### ಶ್ರೀ ಜೆ.ಎಸ್. ಅಮ್ಮಣ್ಣವರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಯಕುಮಾರ ಶ್ರೀಪಾಲ್ ಅಮ್ಮಣ್ಣವರ್ ಅವರು ಬೆಳಗಾಂ ಜಿಲ್ಲೆಯ ಸದಲಗಾದಲ್ಲಿ ಜನಿಸಿದ್ದು, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯಾಗಿ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ದೂದ್‌ಗಂಗಾ–ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕರಾಗಿ, ಇನ್ನಿತರ ಹಲವಾರು ಸಂಘ ಸಂಸ್ಥೆಗಳ ಮೂಲಕ ಸಮಾಜ ಸೇವೆಯನ್ನು ಮಾಡಿದ್ದರು. ಶ್ರೀಯುತರು ಐದನೇ ವಿಧಾನಸಭೆಗೆ ಸದಲಗಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಜೆ.ಎಸ್. ಅಮ್ಮಣ್ಣವರ್ ಅವರು ದಿನಾಂಕ 03.09.2004ರಂದು ನಿಧನ ಹೊಂದಿದರು.

### ಶ್ರೀ ಎಸ್.ಆರ್. ಲಕ್ಷ್ಮಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ಆರ್. ಲಕ್ಷ್ಮಯ್ಯ ಅವರು ದಿನಾಂಕ 20.04.1928ರಂದು ಜನಿಸಿದ್ದು, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ಏಳು, ಎಂಟು ಹಾಗೂ ಹತ್ತನೇ ವಿಧಾನಸಭೆಗೆ ಬೀರೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಎಸ್.ಆರ್. ಲಕ್ಷ್ಮಯ್ಯ ಅವರು ದಿನಾಂಕ 06.10.2004ರಂದು ನಿಧನ ಹೊಂದಿದರು.

### ಶ್ರೀ ಎ.ಎ. ದೇಸಾಯಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆನಂದರಾವ್ ಎ. ದೇಸಾಯಿ ಅವರು ವೃತ್ತಿಯಲ್ಲಿ ವಕೀಲರಾಗಿ ಸಮಾಜ ಸೇವೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಶ್ರೀಯುತರು ಐದನೇ ವಿಧಾನಸಭೆಗೆ ಅಥಣಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಎ.ಎ. ದೇಸಾಯಿ ಅವರು ದಿನಾಂಕ 30.10.2004ರಂದು ನಿಧನ ಹೊಂದಿದರು.

### ಶ್ರೀ ಎ.ಡಿ. ಬಿಳಿಗೌಡ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಡಿ. ಬಿಳಿಗೌಡ ಅವರು ದಿನಾಂಕ 20.07.1924ರಂದು ಮದ್ದೂರು ತಾಲ್ಲೂಕಿನ ಆಟಲವಾಡಿಯಲ್ಲಿ ಜನಿಸಿ, ಸಹಕಾರ ಹಾಗೂ ಶೈಕ್ಷಣಿಕ ರಂಗದಲ್ಲಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು ಕ್ವಿಟ್ ಇಂಡಿಯ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದರು. ಕೊಪ್ಪ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ, ಮೈಸೂರು ಸಕ್ಕರೆ ಕಂಪನಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಶ್ರೀಯುತರು ಮದ್ದೂರು ಕ್ಷೇತ್ರದಿಂದ ಐದನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಎ.ಡಿ. ಬಿಳಿಗೌಡ ಅವರು ದಿನಾಂಕ 08.11.2004ರಂದು ನಿಧನ ಹೊಂದಿದರು.

### ಶ್ರೀ ಗಂಗಾಭೋವಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗಂಗಾಭೋವಿ ಅವರು ದಿನಾಂಕ 04.02.1931ರಂದು ತುಮಕೂರು ಜಿಲ್ಲೆ ಮಾಕನಹಳ್ಳಿ ಗ್ರಾಮದಲ್ಲಿ ಜನಿಸಿದ್ದು, ಸಾಮಾಜಿಕ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ್ದರು. ನಾಲ್ಕನೇ ವಿಧಾನಸಭೆಗೆ ಗುಳೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು ಹಾಗೂ ತುಮಕೂರು ನಗರಸಭೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಗಂಗಾಭೋವಿ ಅವರು ದಿನಾಂಕ 13.11.2004ರಂದು ನಿಧನ ಹೊಂದಿದರು.

### ಶ್ರೀ ಕೆ. ನಾರಾಯಣಪ್ಪ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ನಾರಾಯಣಪ್ಪ ಅವರು ಗ್ರಾಮ ಪಂಚಾಯ್ತಿ ಸದಸ್ಯರಾಗಿ ಮತ್ತು ಹಲವಾರು ಸಮಿತಿಗಳ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದು, ಆರನೇ ವಿಧಾನಸಭೆಗೆ ದೇವನಹಳ್ಳಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಕೆ. ನಾರಾಯಣಪ್ಪ ಅವರು ದಿನಾಂಕ 24.12.2004ರಂದು ನಿಧನ ಹೊಂದಿದರು.

### ಶ್ರೀ ಜಿ. ರಾಮದಾಸ್

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ. ರಾಮದಾಸ್ ಅವರು ದಿನಾಂಕ 09.05.1928ರಂದು ಹೊಸದುರ್ಗ ತಾಲ್ಲೂಕಿನ ದೊಡ್ಡಘಟ್ಟದಲ್ಲಿ ಜನಿಸಿದ್ದು, ಗ್ರಾಮ ಪಂಚಾಯ್ತಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಹಿಂದುಳಿದ ವರ್ಗಗಳು ಮತ್ತು ಶೋಷಿತ ಜನತೆಯ ಏಳಿಗೆಗಾಗಿ ಕಾರ್ಯನಿರ್ವಹಿಸಿದ್ದರು. ಎಂಟನೇ ವಿಧಾನಸಭೆಗೆ ಹೊಸದುರ್ಗ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಜಿ. ರಾಮದಾಸ್ ಅವರು ದಿನಾಂಕ 25.12.2004ರಂದು ನಿಧನ ಹೊಂದಿದರು.

**ಶ್ರೀ ಆರ್. ಕೆಂಚಪ್ಪ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್. ಕೆಂಚಪ್ಪ ಅವರು ಪಾವಗಡ ತಾಲ್ಲೂಕಿನಲ್ಲಿ ಜನಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಶ್ರೀಯುತರು ಸಹಕಾರ ಸಂಘವನ್ನು ಸ್ಥಾಪಿಸಿ ಹರಿಜನರ ಉದ್ಧಾರಕ್ಕಾಗಿ ಶ್ರಮಿಸಿದ್ದರು. ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷರಾಗಿ, ತಾಲ್ಲೂಕು ಸಲಹಾ ಮಂಡಳಿ ಸದಸ್ಯರಾಗಿ, ಇನ್ನಿತರ ಹಲವಾರು ಸಂಘ ಸಂಸ್ಥೆಗಳ ಮುಖಾಂತರ ಕಾರ್ಯನಿರ್ವಹಿಸಿದ್ದರು. ಶ್ರೀಯುತರು 1962ರಲ್ಲಿ ಮೂರನೇ ವಿಧಾನಸಭೆಗೆ ಪಾವಗಡ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಆರ್. ಕೆಂಚಪ್ಪ ಅವರು ದಿನಾಂಕ 01.01.2005ರಂದು ನಿಧನ ಹೊಂದಿದರು.

**ಶ್ರೀ ಶಂಕರ ಮೊಕಾಶಿ ಪುಣೇಕರ**

ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡಮಿ ಗೌರವ ಪುರಸ್ಕಾರ ಪಡೆದಿದ್ದ ಕನ್ನಡ ಸಾಹಿತ್ಯ ಲೋಕದ ದಿಗ್ಗಜರಲ್ಲಿ ಒಬ್ಬರಾಗಿದ್ದ ಶ್ರೀ ಶಂಕರ ಮೊಕಾಶಿ ಪುಣೇಕರ ಅವರು ನವೋದಯ ಹಾಗೂ ನವ್ಯ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದು ಕನ್ನಡ ನಾಡು ಕಂಡ ಅಪರೂಪದ ಸಂಶೋಧಕರು. ಇವರ "ಅವಧೇಶ್ವರಿ" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪ್ರಾಪ್ತವಾಗಿತ್ತು. "ಗಂಗಮ್ಮ-ಗಂಗಮಾಯಿ" ಕೃತಿ ದೇಶದ ಎಲ್ಲಾ ಅಧಿಕೃತ 16 ಭಾಷೆಗಳಿಗೂ ತರ್ಜುಮೆಯಾಗಿದ್ದುದು ವಿಶೇಷವಾದುದು. ಕನ್ನಡ ಹಾಗೂ ಆಂಗ್ಲ ಎರಡೂ ಭಾಷೆಗಳಲ್ಲಿ ಮಹತ್ವದ ಕೃತಿಗಳನ್ನು ರಚಿಸಿದ್ದು ಶ್ರೀಯುತರು ಪತ್ತೇದಾರಿ ಸಾಹಿತ್ಯಕ್ಕೂ ತಮ್ಮ ಕೊಡುಗೆಯನ್ನು ನೀಡಿದ್ದರು.

ಶ್ರೀ ಶಂಕರ ಮೊಕಾಶಿ ಪುಣೇಕರ ಅವರು ದಿನಾಂಕ 11.08.2004ರಂದು ನಿಧನ ಹೊಂದಿದರು.

**ಸುನಾಮಿ ದುರಂತ**

ಇಂಡೋನೇಷ್ಯಾದ ಸುಮಾತ್ರ ದ್ವೀಪದ ಪಶ್ಚಿಮ ಕಡಲಿನಲ್ಲಿ ದಿನಾಂಕ 26.12.2004ರಂದು ಸಂಭವಿಸಿದ ಕಡಲಾಳದ ಭೀಕರ ಭೂಕಂಪ ದೇಶದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ, ತಮಿಳುನಾಡು, ಪಾಂಡಿಚೇರಿ, ಆಂಧ್ರಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ತೀವ್ರ ವಿನಾಶಕ್ಕೆ ಕಾರಣವಾಗಿದ್ದು, ಸಹಾಸ್ರಾರು ಜನರ ಬಲಿ ತೆಗೆದುಕೊಂಡಿದೆ. ಭೂಕಂಪದ ತೀವ್ರತೆಯಿಂದ ಸುನಾಮಿ ಎಂದು ಕರೆಯಲ್ಪಡುವ ದೈತ್ಯ ಕಡಲ ಅಲೆಗಳು ಉಕ್ಕಿ ಹಿಂದೂ ಮಹಾಸಾಗರ ಮತ್ತು ಬಂಗಾಲ ಕೊಲ್ಲಿಯ ದಡದ ರಾಜ್ಯಗಳಿಗೆ ಅಪ್ಪಳಿಸಿದ್ದರಿಂದ ಅಪಾರ ಸಾವುನೋವು, ಆಸ್ತಿಪಾಸ್ತಿಗಳಿಗೆ ನಷ್ಟವುಂಟಾಗಿದೆ. ಈ ಭಯಂಕರ ಸುನಾಮಿ ಅಲೆಗಳಿಂದ ಉಂಟಾದ ತೊಂದರೆಯಿಂದ ನಿರಾಶ್ರಿತರಾದ ಜನರ ಸಹಾಯಕ್ಕೆ, ರಾಜ್ಯದ ಜನತೆ ನೀಡಿದ ಸಹಕಾರ ಅತ್ಯಂತ ಅಭಿನಂದನಾರ್ಹವಾದುದು. ಸಹಸ್ರಾರು ಮಂದಿ ಮೃತಪಟ್ಟು ಲಕ್ಷಾಂತರ ಜನರು ನಿರ್ಗತಿಕರಾಗಿರುವುದು ಶತಮಾನದ ಅತ್ಯಂತ ಘೋರ ದುರಂತವೆಂದು ಪರಿಗಣಿಸಲ್ಪಟ್ಟಿದೆ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):** ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಮತ್ತು ಈ ಅಧಿವೇಶನದ ನಡುವೆ ಈ ರಾಜ್ಯದ, ದೇಶದ ಹಲವಾರು ಗಣ್ಯ ವ್ಯಕ್ತಿಗಳು ನಮ್ಮನ್ನು ಅಗಲಿ ಹೋಗಿದ್ದಾರೆ. ವಿಶೇಷವಾಗಿ, ಸುನಾಮಿ ದುರಂತದಲ್ಲಿ ವಿಶ್ವದಲ್ಲಿ ಭಯಂಕರ ದುರ್ಘಟನೆ ಜರುಗಿದೆ. ಇವೆಲ್ಲಕ್ಕೂ ಕೂಡ ಸಂತಾಪ ಸೂಚಿಸುವ ಪ್ರಸ್ತಾವವನ್ನು ತಾವು ಮಂಡಿಸಿದ್ದೀರಿ. ಈ ಸೂಚನೆಯನ್ನು ನಾನು ಅನುಮೋದಿಸುತ್ತಾ, ಪ್ರಪ್ರಥಮವಾಗಿ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಶ್ರೀಮಾನ್ ಪಿ.ವಿ. ನರಸಿಂಹರಾವ್‌ರವರು ಈ ದೇಶ ಕಂಡ ಅತ್ಯಂತ ಯಶಸ್ವಿ ಪ್ರಧಾನಮಂತ್ರಿಗಳಲ್ಲೊಬ್ಬರು. ಅವರು

ರಾಜ್ಯದ ಮಂತ್ರಿಯಾಗಿ, ಕೇಂದ್ರದ ಮಂತ್ರಿಗಳಾಗಿ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿ, ಕೊನೆಗೆ ಐದು ವರ್ಷಗಳ ಕಾಲ ದೇಶದ ಪ್ರಧಾನ ಮಂತ್ರಿಯಾಗಿದ್ದಾರೆ. ನಾವು ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಓದತಕ್ಕಂಥ ಕಾಲದಲ್ಲಿ ಅವರು ಆಂಧ್ರಪ್ರದೇಶದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದರು. ಅವರ ಮಗ ರಂಗರಾವ್ ಅವರೊಡಗೂಡಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ನಾವು ಓದುತ್ತಿದ್ದೆವು. ಅಲ್ಲಿನ ನಗರದಲ್ಲಿದ್ದ ಅವರ ಮನೆಗೆ ನಾವು ಹೋಗಿ ಬರುತ್ತಿದ್ದ ಕಾಲದಲ್ಲಿ, 1960ರಲ್ಲಿ ನಮ್ಮ ಅವರ ನಡುವೆ ವಿಶೇಷ ಸಂಬಂಧ ನೆಲೆಸಿತ್ತು. ಅವರು ಸುಮಾರು ಹದಿನಾಲ್ಕು ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ ದೊಡ್ಡ ಚಿಂತನಶೀಲ ವ್ಯಕ್ತಿಯಾಗಿದ್ದರು. ಆಗ ಆಂಧ್ರಪ್ರದೇಶದಲ್ಲಿ ತೆಲಂಗಾಣ ಚಳವಳಿಯ ಕಾವು ಇತ್ತು. ಅಲ್ಲಿನ ಭೂಮಾಲೀಕರ ಮತ್ತು ಭೂ ಹಿಡುವಳಿದಾರರ ನಡುವಣ ಸಂಘರ್ಷದಲ್ಲಿ ಆರು ತಿಂಗಳ ಕಾಲ ಜರುಗಿದ ತೆಲಂಗಾಣ ಚಳುವಳಿ ಹೈದರಾಬಾದ್ ಪ್ರಾಂತ್ಯಕ್ಕೂ ಹಬ್ಬುವ ಮೂಲಕ ತನ್ನದೇ ಆದ ವಿಶೇಷ ಸ್ವರೂಪ ಪಡೆದುಕೊಂಡಿತ್ತು. ಅವೆಲ್ಲವನ್ನೂ ಗಮನಿಸಿದ ಅವರು ಆಗಿನ ಕಾಲದ ಸ್ವಾತಂತ್ರ್ಯ ಹೋರಾಟಗಾರರಾದ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ರಾಜಕೀಯ ಪ್ರವೇಶಿಸಿ, ಕೊನೆಗೆ ಸ್ವಾಮಿ ರಮಾನಂದ ತೀರ್ಥರ ಶಿಷ್ಯತ್ವ ಸ್ವೀಕರಿಸಿ, ಅವರ ಧ್ಯೇಯ–ಧೋರಣೆಗಳನ್ನು ಪರಿಪಾಲಿಸುತ್ತಿದ್ದರು. ನಾನು, ವಿಲಾಸರಾವ್ ದೇಶ್‌ಮುಖ್ ಹಾಗೂ ಮಹಾರಾಷ್ಟ್ರದ ಆಗಿನ ಮುಖ್ಯಮಂತ್ರಿಗಳಾಗಿದ್ದ ಸುಶೀಲ್‌ಕುಮಾರ್ ಶಿಂಧೆ ಎಲ್ಲರೂ ಸೇರಿಕೊಂಡು ಸ್ವಾಮಿ ರಮಾನಂದ ತೀರ್ಥರ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆವು. ಸ್ವಾಮಿ ರಮಾನಂದ ತೀರ್ಥರ political philosophy ರೀತ್ಯ ಹೇಗೆ ಮುಂದುವರೆಯಬೇಕೆಂಬ ಬಗ್ಗೆ ಅವರು ವಿಶೇಷವಾಗಿ ಪ್ರತಿಪಾದಿಸಿದರು. ದಿವಂಗತ ಪಿ.ವಿ. ನರಸಿಂಹರಾವ್‌ರವರು 'ಇನ್‌ಸೈಡರ್' ಎಂಬ ಪುಸ್ತಕ ಬರೆದಿದ್ದು, ಇದರ ಕನ್ನಡಾನುವಾದದ ಪುಸ್ತಕವನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಯಿತು. ಅವರ ಬಗ್ಗೆ ಹೇಳಬೇಕಾದರೆ, ಕಾಂಗ್ರೆಸ್ ಪಕ್ಷದ ಮಹಾಧಿವೇಶನದಲ್ಲಿ political resolutionಗಳನ್ನು ಯಾವಾಗಲೂ ಅವರೇ ಮಂಡಿಸುತ್ತಿದ್ದುದು. ದೇಶದ ಮತ್ತು ವಿದೇಶದ ರಾಜಕೀಯ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ಮಂಡಿಸುತ್ತಿದ್ದ ಕಾಂಗ್ರೆಸ್ ಪಕ್ಷದ ಒಬ್ಬ ದೊಡ್ಡ ಮುಖಂಡ, ಗಾಂಧೀವಾದಿಯಾಗಿದ್ದರು. ವಿಶೇಷವಾಗಿ, ದೇಶದ ಬಗ್ಗೆ ಚಿಂತಿಸುತ್ತಿದ್ದ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ. ಇತ್ತೀಚೆಗೆ ಅವರ ಆರೋಗ್ಯ ಸರಿ ಇರಲಿಲ್ಲ. ಅವರಲ್ಲಿ ಕರ್ನಾಟಕ ಮತ್ತು ನಮ್ಮ ಬಗ್ಗೆ ಹೆಚ್ಚಿನ ಸಂಬಂಧವಿತ್ತು. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ್ದ ಡಾ॥ ಬಾವುಸಾಬ್ ದೇವಳಂಕರ್‌ರವರು ಮುಂಚೂಣಿಯಲ್ಲಿದ್ದು ಗುಲ್ಬರ್ಗಾದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿದ್ದ ಶಿಕ್ಷಣ ಸಂಸ್ಥೆಗೆ ಅವರು ಆಗಿಂದಾಗ್ಗೆ ಬರುತ್ತಿದ್ದರು. ಅವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದಾಗ ಭೂ ಸುಧಾರಣೆ ಕಾನೂನನ್ನು ಅಸ್ತಿತ್ವಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಿದರು. ಅದರ ಪರಿಣಾಮವಾಗಿ ಅವರು ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳುವ ಸಂದರ್ಭ ಒದಗಿಬಂತು. ಅವರು ಜವಾಹರ್‌ಲಾಲ್ ನೆಹರೂರವರ ಸಮೀಪವರ್ತಿಯಾಗಿ, ಶ್ರೀಮತಿ ಇಂದಿರಾಗಾಂಧಿಯವರ ಮತ್ತು ಕಾಂಗ್ರೆಸ್ ಪಕ್ಷದ ಹಾಗೂ ವಿಶೇಷವಾಗಿ ಒಬ್ಬ ಮೇಧಾವಿಯನ್ನು ಕಳೆದುಕೊಂಡಂತಾಗಿದೆ. ನಾನು ಈ ಸಭೆಯ ನಾಯಕನಾಗಿ ಎಲ್ಲರ ಪರವಾಗಿ ದಿವಂಗತರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಬಗ್ಗೆ ಕೆಲವು ಮಾತುಗಳನ್ನು ತಮ್ಮ ಮುಂದೆ ಪ್ರಸ್ತಾಪಿಸುತ್ತಿದ್ದೇನೆ.

ದಿವಂಗತ ಕೋಲೂರು ಮಲ್ಲಪ್ಪನವರು ನಮ್ಮ ಜಿಲ್ಲೆಯವರಾಗಿದ್ದು, ಇವೊತ್ತು ನಾನಾಗಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ವಿಧಾನಸಭೆಯ ಮೆಟ್ಟಿಲೇರತಕ್ಕ ಅವಕಾಶ ಕಲ್ಪಿಸಿಕೊಟ್ಟಂಥವರೇ ಅವರು. ಅವರು 1952ರಲ್ಲಿ ಸುರಪುರ ಮತ್ತು ಸೇಡಂ ತಾಲ್ಲೂಕಿನಿಂದ

ಶಾಸಕರಾಗಿದ್ದರು. 1953ರಲ್ಲಿ ಗುರಗಳ್ ರಾಮಕೃಷ್ಣರವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. ಆಗಿನ ಕಾಲದಲ್ಲಿ ಜೆ.ಬಿ. ನರಸಿಂಗರಾವ್‌ರವರ ಜೊತೆಯಲ್ಲಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷಗಿರಿಗೆ ಸ್ಪರ್ಧಿಸಿದ್ದರು. ಗುರಗಳ್ ರಾಮಕೃಷ್ಣರವರು ಉಸ್ಮಾನಿಯಾ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಅವರೂ ಕೂಡ ಆಸ್ಪತ್ರೆಯಿಂದ ಬಂದು ಅವರಿಗೆ ಮತ ಹಾಕಿದರು! 1953ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷಗಿರಿಗೆ ರೆಡ್ಡಿ ಜನಾಂಗದ ನಡುವೆ ತೀವ್ರ ಪೈಪೋಟಿ ಇದ್ದಾಗ ಕೋಲೂರು ಮಲ್ಲಪ್ಪನವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಗಾದಿಗೆ ಏರಬೇಕಾದರೆ ಮುಖ್ಯಮಂತ್ರಿಗಳಾದ ಗುರಗಳ್ ರಾಮಕೃಷ್ಣರಾದಿಯಾಗಿ ಎಲ್ಲರೂ ಕೂಡ ಅವರನ್ನು ಸಮರ್ಥಿಸಿಕೊಂಡರು. ತನ್ಮೂಲಕ ಅವರು ಗೆದ್ದು ಬಂದರು. ಅವರು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. 1983ರಲ್ಲಿ ಗಂಡೂರಾವ್‌ರವರು ಮುಖ್ಯಮಂತ್ರಿಯಾದಾಗ ಕಾಂಗ್ರೆಸ್ ಪಕ್ಷಕ್ಕೆ ಜಯ ಸಿಗಲಿಲ್ಲ. ಆಗ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುತ್ತಿದ್ದ ಕಾಲದಲ್ಲಿ ಪಾರ್ಲಿಮೆಂಟರಿ ಬೋರ್ಡ್ ಸಭೆ ನಡೆಯುತ್ತಿತ್ತು. ಆಗ ಶ್ರೀಮತಿ ಇಂದಿರಾಗಾಂಧಿಯವರು ಕೋಲೂರು ಮಲ್ಲಪ್ಪನವರನ್ನು ಕರೆತರಬೇಕೆಂದು ಹೇಳಿದಾಗ, ಆಗ ಅವರು western coastನಲ್ಲಿ ಚುನಾವಣೆಗೆ ನಿಂತಿದ್ದರು. ನರಸಿಂಹರಾವ್ ಅವರು ಬಂದು ಕೋಲೂರು ಮಲ್ಲಪ್ಪನವರನ್ನು ಕರೆದುಕೊಂಡು ಹೋಗಿ ಅವರನ್ನು ರಾಜ್ಯಸಭೆಗೆ ಸದಸ್ಯರನ್ನಾಗಿ ಆಯ್ಕೆ ಮಾಡಿದರು ಮತ್ತು ಪಾರ್ಲಿಮೆಂಟ್ ಬೋರ್ಡ್‌ಗೂ ಸದಸ್ಯರನ್ನಾಗಿ ನೇಮಿಸಿದರು. ಒಮ್ಮೆ 1968ರಲ್ಲಿ ದಿವಂಗತ ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ, ಮತ್ತೆ ಇನ್ನೆರಡು ಸಲ. ಈ ತರಹ ಅವರು ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದಾರೆ. ಕೋಲೂರು ಮಲ್ಲಪ್ಪನವರ 97ನೇ ಜನ್ಮದಿನವನ್ನು ಆಚರಿಸುವ ಕಾಲದಲ್ಲಿ ಪಿ.ವಿ. ನರಸಿಂಹರಾವ್ ಅವರು ಆಗಮಿಸಿದ್ದರು. ಅವರು ಕೋಲೂರು ಮಲ್ಲಪ್ಪನವರನ್ನು ಪ್ರಸ್ತಾಪಿಸುತ್ತಾ, "1980ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಪುನಃ ಈ ರಾಷ್ಟ್ರದ ಪ್ರಧಾನಮಂತ್ರಿಗಳಾಗುವ ಕಾಲದಲ್ಲಿ ಕೋಲೂರು ಮಲ್ಲಪ್ಪನವರ ಪಾತ್ರ ಹೆಚ್ಚು ಇತ್ತು" ಎಂದು ತಿಳಿಸಿದರು. ಒಬ್ಬ ಮೇಧಾವಿ, ನಮ್ಮ ಭಾಗದ ಸ್ವಾತಂತ್ರ್ಯ ಹೋರಾಟಗಾರ, ಆಗಿನ ನಿಜಾಮರ ವಿರುದ್ಧ ಚಳವಳಿ ನಡೆಸಿದ ಒಬ್ಬ ದೇಶಭಕ್ತ ಮತ್ತು ಸಾಮಾಜಿಕ ನ್ಯಾಯ ಒದಗಿಸುವ ರೀತಿಯಲ್ಲಿ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದ ಕೋಲೂರು ಮಲ್ಲಪ್ಪನವರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ನಾವು, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆಯವರೆಲ್ಲರೂ ಸೇರಿಕೊಂಡು ಅವರು ನಿಧನರಾದಾಗ ಅಂತಿಮ ನಮನ ಸಲ್ಲಿಸಲು ಯಾದಗಿರಿಗೆ ಹೋಗಿ ಬಂದಿದ್ದೆವು. ನಮ್ಮ ರಾಜ್ಯದ, ರಾಷ್ಟ್ರಮಟ್ಟದ ಮೇಲ್ಪಂಕ್ತಿಯಲ್ಲಿ ಕೆಲಸ ಮಾಡುತ್ತಿದ್ದ ಕೋಲೂರು ಮಲ್ಲಪ್ಪನವರು ನಮ್ಮೆಲ್ಲರನ್ನೂ ಅಗಲಿ ಹೋಗಿರುವುದಕ್ಕೆ ಅವರಿಗೆ ಈ ಮೂಲಕ ಸಂತಾಪ ಸೂಚಿಸುತ್ತೇನೆ. ಪ್ರಖ್ಯಾತ ಅಣುವಿಜ್ಞಾನ ಡಾ|| ರಾಜಾರಾಮಣ್ಣನರು, ಅವರು ತುಮಕೂರಿನವರು, ರಾಷ್ಟ್ರಪತಿಗಳಾದ ಡಾ|| ಅಬ್ದುಲ್‌ಕಲಾಂರವರು ಕರ್ನಾಟಕ ರಾಜ್ಯಕ್ಕೆ ಪ್ರವಾಸ ಕಾರ್ಯಕ್ರಮ ಹಾಕಿಕೊಂಡಾಗ ಅವರು ಬರುವುದು ತಡವಾಯಿತು. ಕಾರಣ ಡಾ|| ರಾಜಾರಾಮಣ್ಣನವರ ಸ್ಥಿತಿ ಗಂಭೀರವಾಗಿದೆ, ಅವರನ್ನು ಬಾಂಬೆಯಲ್ಲಿ ನೋಡಿಕೊಂಡು ಬರುವುದರಿಂದ ತಡವಾಗಿತೆಂದು ಹೇಳಿದರು, ತದನಂತರ ಡಾ|| ರಾಜಾರಾಮಣ್ಣನವರ ನಿಧನವಾಗಿದೆ. ನಮ್ಮ ಕರ್ನಾಟಕದವರಾಗಿ ಇಡೀ ವಿಶ್ವದಲ್ಲೇ ಪ್ರಖ್ಯಾತ ವಿಜ್ಞಾನಿಯಾಗಿದ್ದರು, ರಾಜಕೀಯವಾಗಿ ಹೇಳುವುದಾದರೆ ಈ ದೇಶದ ರಕ್ಷಣಾ ಸಚಿವರಾಗಿ ಸಹ ಕೆಲಸ ಮಾಡಿದ್ದಾರೆ. ಅವರು ಒಬ್ಬ ದೊಡ್ಡ ವಿಜ್ಞಾನಿ ಹಾಗೂ ದೇಶ ಭಕ್ತರೊಬ್ಬರನ್ನು ಕಳೆದುಕೊಡಂತಾಗಿದೆ, ಅವರಿಗೆ ಕೂಡ ಈ ಸದನ ಸಂತಾಪ ಸಲ್ಲಿಸುತ್ತದೆ. ಅನಂತರ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರು,

ಸಂಗೀತ ಜಗತ್ತಿನಲ್ಲಿ ತಮ್ಮ ಮುಕ್ತ ಕಂಠದಿಂದ ಈ ರಾಷ್ಟ್ರಕ್ಕೆ, ಸಂಗೀತ ಜಗತ್ತಿಗೇನು ಅವರು ಸೇವೆ ಮಾಡಿದ್ದಾರೆ ಅದನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಶ್ರೀ ನಿಟ್ಟೂರು ಶ್ರೀನಿವಾಸರಾವ್‌ರವರು ನಮ್ಮ ರಾಜ್ಯದ ಒಬ್ಬರು ಹಿರಿಯರು, ಶತಯುಷಿಯಾಗಿ, ಬೆಂಗಳೂರು ನಗರದಲ್ಲಿ ಯಾವ ಕಾರ್ಯಕ್ರಮವಾದರೂ ಸಮಯಕ್ಕೆ ಸರಿಯಾಗಿ ಬರತಕ್ಕವರು, ಆಶೀರ್ವಾದ ಮಾಡತಕ್ಕವರು, ಹಿರಿಯ ಗಾಂಧಿವಾದಿಗಳು ಮತ್ತು ರಾಜ್ಯದ ಹಂಗಾಮಿ ರಾಜ್ಯಪಾಲರಾಗಿ, ಮುಖ್ಯನ್ಯಾಯಮೂರ್ತಿಯಾಗಿ ಕೆಲಸ ಕಾರ್ಯವನ್ನು ಮಾಡಿದ್ದಾರೆ, ಅಂಥ ಒಬ್ಬರು ಹಿರಿಯ ನಾಯಕರನ್ನು ರಾಜ್ಯ ಕಳೆದುಕೊಂಡಂತಾಗಿದೆ. ಮಾಜಿ ಸಚಿವರಾದ ಶ್ರೀ ಡಿ.ಎ. ಚಿಣ್ಣಪ್ಪನವರು, ಸಚಿವರಾಗಿದ್ದ ಶ್ರೀ ಆರ್.ಡಿ. ಕಿತ್ತೂರ್‌ರವರು, ಶ್ರೀ ಶಂಕರ ಮೊಕಾಶಿ ಪುಣೇಕರ್‌ರವರು, ಶ್ರೀಮತಿ ಅನ್ನಪೂರ್ಣಮ್ಮನವರು, ಶ್ರೀ ಜೆ.ಎಸ್. ಅಮ್ಮಣ್ಣವರ್‌ರವರು, ಶ್ರೀ ಎಸ್.ಆರ್. ಲಕ್ಷ್ಮಯ್ಯನವರು, ಶ್ರೀ ಎ.ಎ. ದೇಸಾಯಿಯವರು, ಶ್ರೀ ಎ.ಡಿ. ಬಿಳಿಗೌಡರವರು, ಶ್ರೀ ಗಂಗಾಭೋವಿಯವರು, ಶ್ರೀ ಕೆ. ನಾರಾಯಣಪ್ಪನವರು, ಶ್ರೀ ಜಿ. ರಾಮದಾಸ್‌ರವರು, ಶ್ರೀ ಆರ್. ಕೆಂಚಪ್ಪ ಇವರೆಲ್ಲರನ್ನೂ ನಾವು ಕಳೆದುಕೊಂಡಿದ್ದೇವೆ, ಅದಕ್ಕಾಗಿ ತಾವು ಮಂಡಿಸಿದ ಸಂತಾಪ ಸೂಚನೆಗೆ ನಾನೂ ಕೂಡ ಅನುಮೋದನೆ ಕೊಡುತ್ತಿದ್ದೇನೆ. ವಿಶೇಷವಾಗಿ ಸುನಾಮಿ ದುರಂತ. ಯಾರೂ ಕೂಡ ಊಹಿಸಲಾರದಂಥ ಈ ಘಟನೆ ನಡೆದಿದೆ. ಇದರ ಬಗ್ಗೆ ವಿವರಗಳನ್ನು ಹೇಳಲು ನಾನು ಬಯಸುವುದಿಲ್ಲ. ಪತ್ರಿಕೆಗಳಲ್ಲಿ ಇದರ ಬಗ್ಗೆ ಸಾಕಷ್ಟು ಬಂದಿದೆ. ಮತ್ತೆ ಈ ರೀತಿಯ ಘಟನೆಗಳು ಸಂಭವಿಸುವ ಬಗ್ಗೆ ವರದಿ ಪತ್ರಿಕೆಗಳ ಮುಖಾಂತರ ಇವತ್ತು ಬರುತ್ತಿದೆ. ಈ ದುರಂತ 25ನೇ ಡಿಸೆಂಬರ್ 2004 ರಂದು ಆಯಿತು. 26ನೇ ತಾರೀಖು ನಾವು ತುರ್ತಾಗಿ ಸಚಿವಸಂಪುಟದ ಸಭೆ ಸೇರಿ ಬಹಳ ತ್ವರಿತವಾಗಿ ಐದೂವರೆ ಕೋಟಿ ರೂ.ಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ತಮಿಳುನಾಡಿಗೆ ಎರಡು ಕೋಟಿ ರೂ. ಆಂಧ್ರಕ್ಕೆ ಒಂದು ಕೋಟಿ, ರೂ ಅಂಡಮಾನ್ ನಿಕೋಬಾರ್‌ಗೆ ಒಂದು ಕೋಟಿ, ರೂ. ಕೇರಳಾಕ್ಕೆ ಐವತ್ತು ಲಕ್ಷ ರೂ. ಪಾಂಡಿಚೇರಿಗೆ ಐವತ್ತು ಲಕ್ಷ ರೂ. ನಮ್ಮ ಹಣವನ್ನು ಸಂಪುಟದ ನಿರ್ಣಯಿಯದ ಪ್ರಕಾರ ಕೂಡುವ ಕೆಲಸ ಮಾಡಿದ್ದೇವೆ. ಇದರ ಜೊತೆಗೆ ಹಿರಿಯ ಸಚಿವರುಗಳು ಅಲ್ಲಿಗೆ ಹೋಗಿ ನೋಡಿ ಬಂದಿದ್ದಾರೆ. ವಿಶೇಷವಾಗಿ ಅಂಡಮಾನ್‌ನಿಕೋಬಾರ್‌ನಲ್ಲಿ ಆಗಿರತಕ್ಕಂಥ ದುರಂತ ಏನಿದೆ ಇಂಥ ಒಂದು ದುರಂತ ರಾಷ್ಟ್ರದಲ್ಲಿ ಸಂಭವಿಸಿದಾಗ ಕರ್ನಾಟಕ ಸರ್ಕಾರ ಮುಂದೆ ಬಂದು ಕೆಲಸ ಮಾಡಿದ್ದೇವೆ. ಪ್ರಧಾನ ಮಂತ್ರಿಗಳಿನ್ನೂ ನಾನೂ, ಉಪಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ದೇಶ್‌ಪಾಂಡೇಯವರು ಭೇಟಿ ಮಾಡಿ 20 ಕೋಟಿ ರೂಪಾಯಿಗಳನ್ನು ಪ್ರಧಾನ ಮಂತ್ರಿಗಳ ನಿಧಿಗೆ ಕೊಟ್ಟಿದ್ದೇವೆ. 371 ಮೆಟ್ರಿಕ್ ಟನ್ ಆಹಾರಸಾಮಗ್ರಿಗಳನ್ನು ಕಳುಹಿಸುವ ಕೆಲಸ ಮಾಡಿದ್ದೇವೆ. ನಮ್ಮ ಹೋಮ್‌ಮಿನಿಸ್ಟರ್ ಜಸ್ವಂತ್ ಮೆಹತಾ ರವರಿದ್ದಾರೆ, ಸುನಿಲ್‌ದತ್‌ರವರೂ ಕೇಂದ್ರದ ಮಂತ್ರಿಗಳಾಗಿದ್ದಾರೆ, ಅವರೂ ಸಹ ನಾವೇನು timely ಸಹಾಯ ಮಾಡಿದ್ದೇವೆ ಅದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಅಲ್ಲಿನ ಗೌರ್ನರ್ ಆದ ಕಪಾಸೆಯವರ ಜೊತೆ ಸಾಕಷ್ಟು ಸಲ ಮಾತುಕತೆಯಾಡಿದ್ದೇನೆ, ಭಟ್ ಎಂದು chief secretary ಇದ್ದಾರೆ ಅವರ ಜೊತೆ ಮಾತನಾಡಿದ್ದೇವೆ, ಮತ್ತು ಮಾಜಿ ಶಾಸಕರಾದ ಶ್ರೀಮನ್ ಸಭಾಪತಿಯವರ ನೇತೃತ್ವದಲ್ಲಿ ಐದುನೂರು ಜನ ಸೇವಾದಳದವರು ಹೋಗಿ ಕೆಲಸ ಮಾಡಿ ಬಂದಿದ್ದಾರೆ. ಸಂಕಟದಲ್ಲಿರತಕ್ಕ ಜನರಿಗೆ ನಾವು ಮಾಡಿರುವ ಸೇವೆಯ ಬಗ್ಗೆ ನಾವು ಹೇಳಲು ಸಂತೋಷವಾಗುತ್ತಿದೆ, ಯಾವ ರೀತಿ ಸಂತೋಷವೆಂದರೆ ಕರ್ನಾಟಕ ಸರ್ಕಾರ ಮುಂದೆ ಬಂದು ಸಹಾಯ ಮಾಡತಕ್ಕ ರೀತಿಯಲ್ಲಿ ಮಾಡಿದೆ. ಆ ಮೂಲಕ

ಆ ದುರಂತದಿಂದ ಸಂಕಟದಲ್ಲಿರುವ ಜನರಿಗೆ ಸಹಾಯ ಮಾಡಿದ್ದೇವೆ. ನಮ್ಮ ಪ್ರಧಾನ ಕಾರ್ಯದರ್ಶಿಯವರು ಈಗಲೂ ಹೇಳುತ್ತಿದ್ದರು, ಮುಖ್ಯಕಾರ್ಯದರ್ಶಿ ಭಟ್‌ರವರು ಫೋನ್ ಮಾಡಿ ವೈದ್ಯರುಗಳನ್ನು ಕಳುಹಿಸಿಕೊಡಿ ಎಂದಿದ್ದಾರೆ, ನಾವು ಈಗಾಗಲೇ ವೈದ್ಯರುಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಿದ್ದೇವೆ. ಇಂಥ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಇನ್ನೂ ಕೂಡ ಹೆಚ್ಚಿನ ಹಣವನ್ನು ಕೊಡುತ್ತಿದೆ. ಜಿಲ್ಲಾ ಮಟ್ಟದಲ್ಲಿ ಕೂಡ ಈ ಘಟನೆಯಾದ ಮೇಲೆ ಕರ್ನಾಟಕದಲ್ಲಿ ಆ ಜನರ ನೆರವಿಗೇನು ಬರಬೇಕೆಂದು ಮನಸ್ಸಿಗೆ ಬಂದಿದೆ, ಜನರ ಅಭಿಪ್ರಾಯವೇನು ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಮೂಡಿದೆ ತಮ್ಮ ಮೂಲಕ ಕರ್ನಾಟಕದ ಎಲ್ಲಾ ಜನರಿಗೆ, ಸಂಘಸಂಸ್ಥೆಯವರಿಗೆ ಇಂಥ ಅಪಾರವಾದ ಸಹಾಯಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಇವತ್ತಿನ ದಿವಸ ತಾವು ಮಂಡಿಸಿದ ಸಂತಾಪ ಸೂಚನೆಯಲ್ಲಿ ಭಾಗಿಯಾಗಿ ಅದನ್ನು ಅನುಮೋದಿಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು ಸಂತಾಪ ಸೂಚನೆಯ ಬಗ್ಗೆ ಏನು ಮಾತನಾಡಿದ್ದಾರೆ ಅದಕ್ಕೆ ನನ್ನ ಅನುಮೋದನೆಯನ್ನು ಸೂಚಿಸುತ್ತಾ ಮಾಜಿ ಪ್ರಧಾನಿಗಳಾದ ಮಾನ್ಯ ಪಿ.ವಿ. ನರಸಿಂಹರಾವ್‌ರವರನ್ನು ಇತ್ತೀಚೆಗೆ ಅವರಿಗೆ ಇಲ್ಲಿ ಸನ್ಮಾನ ಮಾಡಿದಂಥ ಸಂದರ್ಭದಲ್ಲಿ ಬಹಳ ಹತ್ತಿರದಿಂದ ಅವರನ್ನು ನೋಡುವಂಥ ಅವಕಾಶ ನನಗೆ ಸಿಕ್ಕಿತ್ತು, ಅವರ ಜ್ಞಾಪಕ ಶಕ್ತಿ ಬಹುಮುಖ ಪ್ರತಿಭೆ, ದೇಶದ ಆಗುಹೋಗುಗಳ ಬಗ್ಗೆ ಅವರಿಗಿದ್ದಂಥ ಕಳಕಳಿ, ಅಂಥ ಇಳಿ ವಯಸ್ಸಿನಲ್ಲೂ ಅವರು ಮಾತನಾಡಿದಂಥ ಧಾಟಿಯನ್ನು ನೋಡಿ ಪಕ್ಕದಲ್ಲಿ ಕುಳಿತಿದ್ದ ನಾವೆಲ್ಲಾ ಅಚ್ಚರಿಪಟ್ಟೆವು. ಇದ್ದಾಗ ಅವರ ಸೇವೆಯನ್ನು ನಾವು ಮರೆಯುತ್ತೇವೆ. ಈ ದೇಶದಲ್ಲಾದಂಥ ದೊಡ್ಡ ದುರಂತವೆಂದರೆ, ಒಬ್ಬ ಪ್ರಧಾನಿಯನ್ನು ಆ ಪಕ್ಷ ಕೊನೆಯ ಘಳಿಗೆಯಲ್ಲಿ ಯಾವ ರೀತಿ ನಡೆಸಿಕೊಂಡಿತು ಎನ್ನುವಂಥದ್ದು, ಅದು ಯಾವುದೇ ಪಕ್ಷವಿರಲಿ, ಅದು ಯಾರಿಗೂ ಗೌರವ ತರುವಂಥ ಸಂಗತಿಯಲ್ಲ. ಅವರಿಗೆ ಕೊನೆ ಘಳಿಗೆಯಲ್ಲಿ ಮಾಡಿದಂಥ ಅಪಮಾನದ ವಿರುದ್ಧ ಸೆಟೆದೆದ್ದು ಎಲ್ಲರೂ ಸಿಡಿದೇಳಬೇಕಾಗಿತ್ತು. ಆದರೆ ಈ ದೇಶಕ್ಕೆ ಅವರು ಮಾಡಿದಂಥ ಸೇವೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ, ಅಂಥ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರಂತೂ ಕೋಟ್ಯಾಂತರ ಜನರನ್ನು ಅವರ ಸುಮಧುರ ಕಂಠದಿಂದ ಆಕರ್ಷಣೆ ಮಾಡಿ ಅವರದ್ದೇ ಆದ ಕೊಡುಗೆಯನ್ನು ಈ ದೇಶಕ್ಕೆ, ನಾಡಿಗೆ ಕೊಟ್ಟಂಥ ಬಹಳ ದೊಡ್ಡ ವ್ಯಕ್ತಿ, ನಿಟ್ಟೂರು ಶ್ರೀನಿವಾಸರಾವ್ ರವರು ಆ ಇಳಿಯ ವಯಸ್ಸಿನಲ್ಲೂ ಸಮಯಕ್ಕೆ ಸರಿಯಾಗಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು, ಶಾಂತವಾಗಿ ಕಾರ್ಯಕ್ರಮದಲ್ಲಿ ಪೂರ್ಣ ಕುಳಿತುಕೊಳ್ಳುತ್ತಿದ್ದರು, ಆ ಸಭೆಯಲ್ಲಿ ಅವರು ತಿಳಿದುಕೊಳ್ಳುವಂಥದ್ದೇನೂ ಇರಲಿಲ್ಲ. ಆದರೆ ಕೊನೆಯ ಘಳಿಗೆಯವರೆಗೆ ಈ ನಾಡಿಗೆ ಮಾರ್ಗದರ್ಶನ ಮಾಡುವಂಥ ಅದ್ಭುತವಾದ ಅವರ ಚಿಂತನೆಯನ್ನು ನಾವು ಗಮನಿಸುಬೇಕು. ಅದೇ ರೀತಿ ಡಾ|| ರಾಜಾರಾಮಣ್ಣವರು ಈ ನಾಡು, ದೇಶ ಕಂಡಂಥ ಒಬ್ಬ ವಿಜ್ಞಾನಿ, ಪೋಕ್ರಾನ್ ಅಣುಸ್ಫೋಟದ ಸಂದರ್ಭದಲ್ಲಿ ಅವರು ತೋರಿಸಿದಂಥ ದಿಟ್ಟತನ, ಅದೇ ರೀತಿ ಅನೇಕ ಜನ ಹಿರಿಯರು ಇವತ್ತು ನಮ್ಮನ್ನು ಅಗಲಿ ರಾಷ್ಟ್ರ ಮತ್ತು ರಾಜ್ಯವನ್ನು ತಬ್ಬಲಿ ಮಾಡಿದ್ದಾರೆ. ಎರಡೂ ಮನೆಯ ಶಾಸನ ಸಭೆಯ ಎಲ್ಲಾ ಪ್ರಮುಖ ಸದಸ್ಯರುಗಳು ನಾವಿಲ್ಲಿದ್ದೇವೆ, ಭಗವಂತ ಎಂಥ ಅದ್ಭುತವನ್ನು ಬೇಕಾದರೂ ಸಾಧಿಸುವಂಥ ಶಕ್ತಿಯನ್ನು ನಮಗೆ ಕೊಟ್ಟಿದ್ದಾನೆ, ಎಂಥ ಕಠಿಣವಾದ ಕೆಲಸಗಳಿದ್ದರೂ ಮಾಡುವಂಥ ಅಂಗರಚನೆ ಮಾಡಿದ್ದಾನೆ, ಹಾರ್ಡ್‌ವರ್ಕ್ ಪರಿಶ್ರಮದಿಂದ ನಾವು

ಏನೇನು ಬೇಕಾದರೂ ಮಾಡಿ ತೋರಿಸಬಹುದು ಎಂಬುದನ್ನು ಮಾನ್ಯ ನರಸಿಂಹರಾಯರು ಮತ್ತು ಎಂ.ಎಸ್. ಸುಬ್ಬುಲಕ್ಷ್ಮಿಯವರು, ಕೊಲೂರು ಮಲ್ಲಪ್ಪನವರು, ಡಾ|| ರಾಜಾರಾಮಣ್ಣನವರು, ನಿಟ್ಟೂರು ಶ್ರೀನಿವಾಸರಾವ್‌ರವರ ಜೀವನದಲ್ಲಿ ಮತ್ತು ಇತರ ಹಿರಿಯರ ಜೀವನದಲ್ಲಿ ನಾವು ಕಾಣಬಹುದು, ಕೇವಲ ಶ್ರದ್ಧಾಂಜಲಿ ಅರ್ಪಿಸಿದರೆ ನಮ್ಮ ಕರ್ತವ್ಯ ಮುಗಿಯಿತು ಎನ್ನುವುದಕ್ಕಿಂತ ಅವರುಗಳು ಹಾಕಿಕೊಟ್ಟ ದಾರಿಯಲ್ಲಿ ನಡೆಯುವಂಥ ಪ್ರಾಮಾಣಿಕ ಪ್ರಯತ್ನದ ಕೆಲಸವನ್ನು ನಾವು ಮಾಡಿದಾಗ ಮಾತ್ರ ನಿಜವಾದಂಥ ಶ್ರದ್ಧಾಂಜಲಿಯೆಂದು ನಾನು ತಿಳಿದುಕೊಂಡಿದ್ದೇನೆ. ಸುನಾಮಿ ದುರಂತ, ಪ್ರಕೃತಿ ಮೇಲೆ ಮನುಷ್ಯ ಮಾಡುವಂಥ ದೌರ್ಜನ್ಯಕ್ಕೆ ಒಂದು ರೀತಿಯ ಉತ್ತರ ಭಗವಂತ ಕೊಟ್ಟಿದ್ದಾನೆ. ಈ ರೀತಿಯ ಅನ್ಯಾಯವನ್ನು ಪ್ರಕೃತಿ ಸಹಿಸುವುದಿಲ್ಲ ಎನ್ನುವಂತಹ ಅರಿವು ನಮಗೆ ಬಂದರೆ, ಬಹಳ ದೊಡ್ಡ ಕೆಲಸವನ್ನು ನಾವು ಮಾಡಿದಂತಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ಸುನಾಮಿ ದುರಂತದ ಬಗ್ಗೆ ನಮ್ಮ ರಾಜ್ಯ ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ಅದ್ದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಆದರೆ ಈ ಸಂದರ್ಭದಲ್ಲಿ ಸರ್ಕಾರಕ್ಕೆ ನನ್ನದೊಂದು ವಿನಂತಿ. ದಯಮಾಡಿ ಈ ಸುನಾಮಿ ದುರಂತದಿಂದ ಸರ್ವನಾಶವಾಗಿರುವಂತಹ ಕೆಲವು ಗ್ರಾಮಗಳನ್ನು ಸರ್ಕಾರ ದತ್ತು ತೆಗೆದುಕೊಂಡು, ಅಲ್ಲಿ ಮನೆಗಳನ್ನು ಕಟ್ಟಿಸಿ, ಅದಕ್ಕೆ ಬೇಕಾದಂತಹ ಎಲ್ಲಾ ನಾಗರಿಕ ಸವಲತ್ತುಗಳನ್ನು ಕೊಡಿಸುವುದರ ಮೂಲಕ, ಇಡೀ ದೇಶಕ್ಕೆ ಬೇರೆಯವರಿಗೆ ಈ ರಾಜ್ಯ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಂಡಿದೆ ಎನ್ನುವಂತಹ ಕೆಲಸ ಆಗಬೇಕು. ನಮ್ಮಲ್ಲಿ ಬಹಳ ಒಳ್ಳೆಯ ಇಂಜಿನಿಯರ್ಸ್ ಇದ್ದಾರೆ, ತಜ್ಞರಿದ್ದಾರೆ, ಇದಕ್ಕಾಗಿ ತನು–ಮನ–ಧನವನ್ನು ಅರ್ಪಿಸುವಂತಹ ಕನ್ನಡ ನಾಡಿನ ಜನರಿದ್ದಾರೆ, ಅವರ ಉಪಯೋಗವನ್ನು ನಾವು ಮಾಡಿಕೊಳ್ಳಬೇಕು ಎನ್ನುವಂತಹ ವಿನಂತಿಯನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳಲಿಕ್ಕೆ ಇಷ್ಟಪಡುತ್ತೇನೆ. ಈ ಸುನಾಮಿ ದುರಂತದ ನಂತರವಾದರೂ ಸಹ, ಈ ಅಸ್ಲಾಂ ಬಾಬಾ, ಬೆನ್ನಿಹಿನ್ ತರಹದವರ ಬೆನ್ನು ಹತ್ತುವಂತಾದ್ದು ಈ ದೇಶದ ಜನ, ಈ ನಾಡಿನ ಜನ, ಈ ಅಂಧಕಾರದಲ್ಲಿ ಮುಳುಗಿ, ದೊಡ್ಡ ದೊಡ್ಡವರೇ ಹೋಗಿ ಕಾಲಿಗೆ ಬಿದ್ದು, ಏನೋ ಸಾಧನೆ, ಪವಾಡ ಆಗುತ್ತದೆಂದು ನಂಬಿ, ಈ ನಾಡಿನ ಜನರನ್ನು, ಈ ದೇಶದ ಜನರನ್ನು, ಒಂದು ರೀತಿಯಲ್ಲಿ ಅವರ ಮೋಡಿಗೆ ಬಲಿಯಾಗುವಂತೆ ಮಾಡುವಂತಹ ಕೆಲಸವನ್ನೇನು ನಾವು ಮಾಡುತ್ತಿದ್ದೇವೆ, ಪಕ್ಷಭೇದ ಮರೆತು ನಾನು ಹೇಳುತ್ತೇನೆ, ಇಂತಹದ್ದಕ್ಕೆ ಕನ್ನಡ ನಾಡಿನ ಜನ ಅವಕಾಶ ಮಾಡಿಕೊಡದೇ, ಸುನಾಮಿ ದುರಂತದ ಹಿನ್ನೆಲೆಯಲ್ಲಿ, ನಮ್ಮ ಬೆನ್ನಿಹಿನ್ ಅಂತಹವನ ಕಾಲು ಮುಟ್ಟಿ, ನಮಸ್ಕಾರ ಮಾಡಿ, ಒಂದು ರೀತಿ ಅಂಧಶ್ರದ್ಧೆಗೆ ಈ ನಾಡಿನ ಜನರನ್ನು ಬಲಿ ಮಾಡುವಂತಹ ಅಕ್ಷಮ್ಯ ಅಪರಾಧ ಇನ್ನಾದರೂ ಮಾಡಬೇಡಿ. ಭಾರತದ ಬಗ್ಗೆ ಪ್ರಾರ್ಥನೆ ಮಾಡುವುದಕ್ಕೆ ಬಹಳ ಜನ ಸಾಧು...............

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):–** ಮಾನ್ಯ ಯಡಿಯೂರಪ್ಪನವರೇ, ಒಂದು ನಿಮಿಷ. ದಯವಿಟ್ಟು ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡಿ. ಎಲ್ಲಾ ಜನಾಂಗಗಳಲ್ಲೂ ಕೂಡ ಇವೆಲ್ಲಾ ಇರುವಂತಹದ್ದೇ. ಸಂತಾಪ ಸೂಚಕ ನಿರ್ಣಯದ ಮೇಲೆ ತಾವು ಮಾತನಾಡಿ. ಇದು ನಾವು ಬಹಳ ನೊಂದು ಮಾತನಾಡುವಂತಹ subject ಆಗಿದೆ. ಅದರ ಬಗ್ಗೆ ಬಿಟ್ಟು ಬೇರೆ ಏನನ್ನೋ ಹೇಳುವುದು ಬೇಡ.

**ಶ್ರೀ ಬಿ.ಎಸ್. ಯಡಿಯೂರಪ್ಪ :–** ಮಾನ್ಯ ಮಂತ್ರಿಗಳು ಗಮನ ಕೊಡಲಿಲ್ಲ. ನಾನು ಸುನಾಮಿ ದುರಂತದ ಸಂದರ್ಭದಲ್ಲಿ, ಪ್ರಕೃತಿ ಮೇಲೆ ಮಾನವ ಮಾಡುತ್ತಿರುವಂತಹ ಈ ದೌರ್ಜನ್ಯದ

ಪ್ರತೀಕಾರ ಇದು ಎಂದು ನಾನು ಅಂದುಕೊಂಡಿದ್ದೇನೆ. ನಮ್ಮ ಭಾರತದಲ್ಲಿ ಬಹಳ ಜನ ಸಾಧು-ಸಂತರು, ಇಡೀ ಜಗತ್ತಿಗೆ ಕಲ್ಯಾಣವಾಗಲಿ ಎಂದು ಹೇಳುವಂತಹ, ಮನುಕುಲ ಉಳಿಸುವಂತಹ ಶಕ್ತಿ ಇರುವಂತಹ ವ್ಯಕ್ತಿಗಳಿದ್ದಾರೆ. ಅಸ್ಲಾಂ ಬಾಬಾ ಮತ್ತು ಬೆನ್ನಿಹಿನ್ ಅಂತಹವರ ಬೆನ್ನು ಹತ್ತಿ, ಈ ನಾಡಿನ ಜನಕ್ಕೆ ಅಂಧಶ್ರದ್ಧೆಯನ್ನು ಉಂಟು ಮಾಡಿ, ಮನುಕುಲವನ್ನು ಇನ್ನೂ ಹಾಳು ಮಾಡುವುದಕ್ಕೆ ನಾವು ಮತ್ತು ನೀವ್ಯಾರೂ ಕಾರಣಕರ್ತರಾಗಬಾರದು. ಈ ಸುನಾಮಿ ದುರಂತದ ಮೂಲಕವಾದರೂ ಸಹ, ಇಡೀ ಜಗತ್ತಿಗೆ ಮಾರ್ಗದರ್ಶನ ಮಾಡುವಂತಹ ಶಕ್ತಿ ಇರುವಂತಹ ಭಾರತ, ಇನ್ನೊಬ್ಬರ ಕಾಲಿಗೆ ಬಿದ್ದು, ಅವರ ಮಾರ್ಗದರ್ಶನ ಪಡೆಯುವಂತಹ ಅಗತ್ಯ ಇಲ್ಲ. ಈ ಅಂಧಕಾರದಲ್ಲಿ, ಕಡು ಬಡವರನ್ನು, ಸಾಮಾನ್ಯ ಜನರನ್ನು ಬಲಿ ಮಾಡಬೇಡಿ ಎನ್ನುವಂತಹ ಕಿವಿ ಮಾತನ್ನು ಈ ವೇದಿಕೆ ಕನ್ನಡ ನಾಡಿನ ಜನತೆಗೆ ತಿಳಿಸುವಂತಹ ಪ್ರಯತ್ನ ಮಾಡಿದ್ದೇನೆ. ಆದುದರಿಂದ, ಇವತ್ತು ಈ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಈ ಸಂದರ್ಭದಲ್ಲಿ, ನಮ್ಮ ಪಕ್ಷದ ಪರವಾಗಿ, ಎಲ್ಲಾ ಮಹನೀಯರು ತಮ್ಮದೇ ಆದಂತಹ ಸೇವೆಯನ್ನು ಮಾಡಿ ಅಗಲಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಅವರು ಮಾಡಿದಂತಹ ಒಳ್ಳೆಯ ಕೆಲಸವನ್ನು ನೆನೆದು, ಮುಂದೆ ನಾವು ಅವರ ಆದರ್ಶವನ್ನು ಅನುಸರಿಸುವಂತಹ ಶಕ್ತಿಯನ್ನು ನಮಗೂ ಮತ್ತು ನಿಮಗೆಲ್ಲರಿಗೂ ಕೊಡಲೆಂದು ಆ ಭಗವಂತನಲ್ಲಿ ಪ್ರಾರ್ಥನೆ ಮಾಡಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** :- ಸನ್ಮಾನ್ಯ ಅಧ್ಯಕ್ಷರೇ, ನಾವು ಈ ಸಭೆಗೆ ಬರಲಾರಂಭಿಸಿದ ಮೇಲೆ, ಇಷ್ಟೊಂದು ಜನ ಪ್ರಮುಖರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿರುವುದು ಇವತ್ತೇ ಎಂದು ನಾನು ಭಾವಿಸುತ್ತೇನೆ. ಅದರಲ್ಲೂ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಖ್ಯಾತಿಯ ಜನಗಳಿಗೂ ಕೂಡ ಇವತ್ತು ನಾವು ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ. ಸನ್ಮಾನ್ಯ ಸರಸಿಂಹರಾವ್‌ರವರು, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ, ಈ ರಾಷ್ಟ್ರ ಕಂಡ, ಅದರಲ್ಲೂ ಅತ್ಯಂತ ಕಷ್ಟದ ಕಾಲದಲ್ಲಿ ಐದು ವರ್ಷಗಳ ಕಾಲ ಈ ರಾಷ್ಟ್ರದ ಆಡಳಿತವನ್ನು ಸಮರ್ಪಕವಾಗಿ ನಿಭಾಯಿಸಿದಂತಹ ವ್ಯಕ್ತಿ. ನಾನು ಅವರು ಬರೆದ ಪುಸ್ತಕವನ್ನು ಬಹಳ ಹಿಂದೆಯೇ ಓದಿದ್ದೇನೆ. ಬಹುಶಃ ಅವರು ಆಂಧ್ರ ಪ್ರದೇಶದ Land Reforms Minister ಆಗಿ ಮಾಡಿದಂತಹ ಕೆಲಸವನ್ನು ಬೇರೆ ಯಾರೂ ಈ ರಾಷ್ಟ್ರದಲ್ಲಿ ಮಾಡಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಅದರಲ್ಲಿ ಒಂದು ವಿಚಾರವನ್ನು ಅವರು ಬರೆದಿದ್ದರು. Anti-date ಮಾಡಿ, divorceಗಳನ್ನು ban ಮಾಡಿ, ನಾನು Land Reforms ಅನ್ನು ಜಾರಿಗೊಳಿಸಬೇಕಾದ ಕಾಲ ಬಂತು ಎಂದು ಅವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಒಂದು ಸಂಸಾರದ ಭೂಮಿಯನ್ನು ಮಿತಿ ಮಾಡಬೇಕು ಎಂದಾಗ, ಗಂಡ-ಹೆಂಡತಿ ಕೋರ್ಟಿಗೆ ಹೋಗಿ, divorce ತೆಗೆದುಕೊಂಡು, ಆ ಜಮೀನನ್ನೂ ಕೂಡ ಹಂಚಿಕೊಂಡು, ಎರಡು ಭಾಗ ಮಾಡಿಕೊಂಡು ಅದನ್ನೂ ಕೂಡ ಇಟ್ಟುಕೊಳ್ಳಬಹುದು ಎನ್ನುವಂತಹ ಸ್ಥಿತಿ ನಿರ್ಮಾಣವಾಗಿದ್ದಾಗ, ಹಿಂದಿನ ತಾರೀಖಿನಿಂದ ಅನ್ವಯವಾಗುವಂತಹ ಕಾನೂನನ್ನು ಮಾಡಬೇಕಾಯಿತು ಎಂದಾಗ, ಅವರ ವಿವೇಕ ಎಷ್ಟಿತ್ತು ಎಂಬುದು ಇದರಿಂದ ಅರ್ಥವಾಗುತ್ತದೆ. ಶ್ರೀಮತಿ ಸುಬ್ಬುಲಕ್ಷ್ಮಿಯವರ ಬಗ್ಗೆ ಹೇಳುವುದಾದರೆ, ಕರ್ನಾಟಕ ಮ್ಯೂಸಿಕ್‌ನಲ್ಲಿ ಇಂತಹವರು ಮತ್ತೊಬ್ಬರು ಹುಟ್ಟುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಹಿಂದೂಸ್ತಾನಿ ಮ್ಯೂಸಿಕ್‌ನಲ್ಲಿ ಮನ್ಸೂರ್ ಬಿಟ್ಟರೆ, ಕರ್ನಾಟಕ ಮ್ಯೂಸಿಕ್‌ನಲ್ಲಿ ದಿವಂಗತ ಸುಬ್ಬುಲಕ್ಷ್ಮಿಯವರನ್ನು ಸ್ಮರಿಸಲೇಬೇಕಾಗುತ್ತದೆ. ಇಡೀ ಪ್ರಪಂಚದಲ್ಲಿ, ಅದರಲ್ಲೂ ಅವರು UNOಗೆ ಹೋಗಿ, ಬಂದ ಮೇಲೆ, ದಿವಂಗತ ಸುಬ್ಬುಲಕ್ಷ್ಮಿಯವರ

ಖ್ಯಾತಿಗೆ ಮಿತಿಯೇ ಇಲ್ಲದಂತಾಗಿತ್ತು. ಅವರನ್ನೆಲ್ಲಾ ಕಳೆದುಕೊಂಡು ಇವತ್ತು ನಾವು ಬಡವರಾಗಿದ್ದೇವೆ. ಮಾನ್ಯ ರಾಜಾರಾಮಣ್ಣನವರ ಬಗ್ಗೆ ಹೇಳುವುದಾದರೆ, ತುಮಕೂರಿನಲ್ಲಿ ಹುಟ್ಟಿದ ಒಬ್ಬ ಮನುಷ್ಯ ಇಷ್ಟೊಂದು ಖ್ಯಾತಿ ತೆಗೆದುಕೊಂಡರಲ್ಲಾ ಎಂದು ಅವರ ಬಗ್ಗೆ ನಮಗೆಲ್ಲಾ ಹೆಮ್ಮೆ ಇತ್ತು. ಅವರೆಲ್ಲಾ ಇವತ್ತು ನಮ್ಮ ಮಧ್ಯೆ ಇಲ್ಲ. ಅವರಿಗೆಲ್ಲಾ ನಾನು ತಮ್ಮ ಜೊತೆಗೆ ಸೇರಿಕೊಂಡು ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಇನ್ನು ನನಗೆ ಬಹಳ ಹತ್ತಿರವಾಗಿದ್ದ ಸನ್ಮಾನ್ಯ ಸಾಗರನಹಳ್ಳಿ ರೇವಣ್ಣನವರ ಬಗ್ಗೆ ಹೇಳುವುದಾದರೆ, ನಾನು ವಿಶೇಷವಾಗಿ ಇವತ್ತು ಅವರ ಬಗ್ಗೆ ಮಾತನಾಡುಬೇಕೆಂದಿದ್ದೆ. ಅವರು ನಮ್ಮ ಜಿಲ್ಲೆಯವರು, ನಮ್ಮ ಹಿರಿಯರು. ಬಹುಶಃ ಸಹಕಾರಿ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಮಾಡಿ, 1983–85ರವರೆಗೆ ಈ ಮನೆಯ ಸದಸ್ಯರಾಗಿದ್ದು, ಮಂತ್ರಿಯಾಗಿದ್ದವರು. ಅದೇ ರೀತಿ ನಮ್ಮ ಗಂಗಾಭೋವಿಯವರಷ್ಟು, ನಮ್ಮ ಕೆಂಚಪ್ಪನವರಷ್ಟು ಅವರಷ್ಟು ಸರಳವಾಗಿ ರಾಜಕಾರಣಿಗಳು ಇರುವುದಕ್ಕೆ ಆಗುತ್ತದೆಯೇ ಎಂದು ಯೋಚನೆ ಮಾಡುವಂತಹ ಸ್ಥಿತಿಗೆ ಇವತ್ತು ನಾವು ಬಂದಿದ್ದೇವೆ. ಮಾನ್ಯ ರೇವಣ್ಣನವರನ್ನು ನೋಡಿದವರಿಗೆಲ್ಲಾ ಗೊತ್ತು, ಬಹುಶಃ ನಿಜವಾದ ಅರ್ಥದಲ್ಲಿ ಅವರು ಶರಣರಾಗಿದ್ದರು. ಅವರ ಜೀವನ ನಮಗೆಲ್ಲ ಆದರ್ಶವಾಗಬೇಕು ಎಂದು ಅಂದುಕೊಳ್ಳುತ್ತೇನೆ. ನಮ್ಮ ಗಂಗಾಭೋವಿಯವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಬಹುಶಃ ಅವರು ತುಮಕೂರು ಪುರಸಭೆಗೆ ಅಧ್ಯಕ್ಷರಾದಾಗ, ಗಂಗಾಭೋವಿಯಂತಹವರೂ ಸಹ ಅಧ್ಯಕ್ಷರಾಗುತ್ತಾರಾ ಎನ್ನುವಂತಹ ಸ್ಥಿತಿ ಇತ್ತು. ನಾನು ಮಾನ್ಯ ವಾಟಾಳ್‌ರವರಿಗೆ ಹೇಳುತ್ತಿದ್ದೆ, ಗಂಗಾಭೋವಿ ಎಂದು ಬರೆಯಲಿಕ್ಕೂ ಕೂಡ ಅವರು ಕಷ್ಟ ಪಡುತ್ತಿದ್ದವರು ಅವರು. ಆಗ ಗುಳೂರು ಕ್ಷೇತ್ರ ಇತ್ತು. ಅದು ಮೀಸಲಾದಾಗ, ಅಲ್ಲಿಂದ ಅವರು ಆಯ್ಕೆಯಾಗಿ ಬಂದಿದ್ದರು. ಅವರಿಗೆ ನಾನು ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಇನ್ನು ಜಿ. ರಾಮದಾಸ್‌ರವರ ಬಗ್ಗೆ ಹೇಳುವುದಾದರೆ, ಅವರು ನನ್ನ ಪಕ್ಕದ ಕ್ಷೇತ್ರ ಹೊಸದುರ್ಗದಿಂದ ಶಾಸಕರಾಗಿದ್ದವರು. ಅತ್ಯಂತ ಕಡಿಮೆ ಜನಸಂಖ್ಯೆ ಇರತಕ್ಕಂಥ ಜನಾಂಗದಿಂದ ಅವರು ಬಂದವರಾಗಿದ್ದರು. ರಾಮದಾಸ್‌ರವರೇ, ಹೇಗೆ ನೀವು ಅಲ್ಲಿಂದ ಗೆಲ್ಲುವುದಕ್ಕಾಗುತ್ತದೆ ಎಂದು ನಾನು ಅವರಿಗೆ ತಮಾಷೆ ಮಾಡುತ್ತಿದ್ದೆ. ಅವರು ನನಗೆ ಬಹಳ ಆತ್ಮೀಯರಾಗಿದ್ದರು. 'ಹೇಗೋ ಗೆದ್ದು ಬಿಟ್ಟೆನಪ್ಪ, ಮತ್ತೆ ಪುನಃ ನಾನು ಹೊಸದುರ್ಗದಲ್ಲಿ ನಿಲ್ಲುವುದೇ ಕಷ್ಟವಾಗಿದೆ' ಎಂದು ಅವರು ಹೇಳುತ್ತಿದ್ದರು. ರಾಮದಾಸ್‌ರವರು ಶಾಸಕರಾಗಿದ್ದರು ಎಂದರೆ ನಂಬಲಿಕ್ಕೆ ಆಗುತ್ತಿರಲಿಲ್ಲ. ಅವರು ಅಷ್ಟೊಂದು ಸರಳವಾಗಿದ್ದರು. ಇಂತಹವರೆಲ್ಲಾ ನಮಗೆ ದಾರಿ ಹಾಕಿಕೊಟ್ಟಿದ್ದಾರೆ. ಇನ್ನು ಲಕ್ಷ್ಮಯ್ಯನವರ ಬಗ್ಗೆ ಹೇಳುವುದಾದರೆ, ಅವರು ಈ ಸಭೆಯ ಸದಸ್ಯರಾಗಿದ್ದರು. ನಮ್ಮ ಜೊತೆ ಕಮಿಟಿಗಳಲ್ಲಿ ಮತ್ತು ಇನ್ನಿತರ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದರು. ಮೇಷ್ಟ್ರಾಗಿ ಇಲ್ಲೂ ಕೂಡ ಮೇಷ್ಟ್ರು ಕೆಲಸವನ್ನೇ ಮಾಡುತ್ತೀರೇನೋ ಎಂದು ನಾವೆಲ್ಲಾ ಅವರಿಗೆ ರೇಗಿಸುತ್ತಿದ್ದೆವು. ಅಂತಹವರೆಲ್ಲಾ ಇವತ್ತು ನಿಧನರಾಗಿದ್ದಾರೆ. ಅದರಿಂದಾಗಿ ಈ ರಾಜ್ಯ ಬಡವಾಗಿದೆ. ಅದರಲ್ಲೂ ವಿಶೇಷವಾಗಿ ಈ ಶ್ರದ್ಧಾಂಜಲಿಯಲ್ಲಿ ತುಮಕೂರಿಗೆ ಹತ್ತಿರವಾಗಿದ್ದ 4–5 ಜನರ ಪ್ರಸ್ತಾಪ ಬಂದುಬಿಟ್ಟಿದೆ. ಇದು ರಾಜ್ಯಕ್ಕೆ ಮತ್ತು ಜಿಲ್ಲೆಗೆ ಆಗಿರುವಂತಹ ನಷ್ಟ ಎಂದು ಹೇಳುತ್ತೇನೆ. ಇನ್ನು ಸುನಾಮಿ ದುರಂತದ ಬಗ್ಗೆ ಹೇಳುವುದಾದರೆ, ಯಾರೇ ಮಾನವೀಯತೆ ಇಲ್ಲದಿರುವಂತಹ ಮನುಷ್ಯ ಎಂದುಕೊಂಡರೂ, ಇದರ ಬಗ್ಗೆ ಅವನು ಅನುಕಂಪ ವ್ಯಕ್ತಪಡಿಸದೇ ಇರುವುದಕ್ಕಾಗುವುದೇ ಇಲ್ಲ. ಬಹುಶಃ ಇಡೀ ಶತಮಾನದಲ್ಲಿ ಅಥವಾ ಈ ದಶಕದಲ್ಲಿ ಇಂತಹ ಘಟನೆ ನಡೆಯುತ್ತದೆ. ಎಂದು ಯಾರೂ ಅಂದುಕೊಂಡಿರಲಿಲ್ಲ. ಲಕ್ಷಾಂತರ ಜನರ ಪ್ರಾಣ ಹಾನಿಯಾಗಿ, ಯಾರ್‍ಯಾರು ಎಲ್ಲೆಲ್ಲಿಗೆ ಓಡಬೇಕು ಎಂದು ಗೊತ್ತಿಲ್ಲದೆ ಓಡುವಂತಹ

ಸ್ಥಿತಿಯನ್ನು ಪ್ರಕೃತಿ ನಿರ್ಮಾಣ ಮಾಡಿದ್ದು, ಬಹುಶಃ ನಾವು ಪ್ರಕೃತಿ ಮೇಲೆ ಮಾಡಬಾರದ ಅಪಚಾರ ಮಾಡಿದ್ದೇವೇನೋ ಎಂದು ಎಲ್ಲೋ ಒಂದು ಕಡೆ ನಮಗನ್ನಿಸುತ್ತದೆ. ಭೂಮಿಯ ಮೇಲೆ ಇರಬೇಕಾದ ಸಮತೋಲನವನ್ನು ಹಾಳು ಮಾಡಿದ್ದೇವೇನೋ ಎಂದೂ ಕೂಡ ಅನ್ನಿಸುತ್ತದೆ. ಅದರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕು. ಇದು ಕರ್ನಾಟಕದ ಮಂಗಳೂರು ಭಾಗದವರೆಗೂ ಕೂಡ ವಿಸ್ತಾರವಾಯಿತು. ಆ ಕಡೆ ಆಗಿರುವಂತಹ ನಷ್ಟಗಳನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು. ನಾವು ಬೇರೆಯವರಿಗೆ ಉದಾರವಾಗಿ ಧನ ಸಹಾಯ ಮಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಈ ರಾಜ್ಯ ಕೂಡ ಬಹಳ ಕಷ್ಟದಲ್ಲಿದೆ. ಈ ರಾಜ್ಯದಲ್ಲೂ ಕೂಡ ಅನೇಕ ತಾಪತ್ರಯಗಳು ನಿರ್ಮಾಣವಾಗುವಂತಹ ಸ್ಥಿತಿ ಇದೆ. ಆ ಕಡೆಗೆ ಹೆಚ್ಚು ಆಸಕ್ತಿ ವಹಿಸಬೇಕಾಗುತ್ತದೆ. ದಾನ ಮಾಡುವುದರ ಜೊತೆಗೆ ನಮ್ಮ ರಕ್ಷಣೆಯನ್ನೂ ಸಹ ನಾವು ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿ, ಈ ಎಲ್ಲಾ ಮಹನೀಯರ ಜೀವನ, ಅವರ ಆದರ್ಶ ನಮಗಿರಲಿ ಎಂದು ಹೇಳಿ, ಈ ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**†ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು)** :- ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚನಾ ನಿರ್ಣಯವನ್ನು ಅನುಮೋದನೆ ಮಾಡುತ್ತಾ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಇವರೆಲ್ಲಾ ನಿಧನರಾದವರ ಆತ್ಮಕ್ಕೆ ಶಾಂತಿ ದೊರಕಲಿ, ಇವರ ಅಲಗಿಕೆಯಿಂದ ದೇಶಕ್ಕೆ ಮತ್ತು ರಾಜ್ಯಕ್ಕೆ ಅಪಾರವಾದ ನಷ್ಟವಾಗಿದೆ ಎನ್ನತಕ್ಕಂತಹ ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ಪಿ.ವಿ. ನರಸಿಂಹರಾವ್‌ರವರು ಇವತ್ತು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದಾರೆ, ಬಹಳ ದೀರ್ಘ ಕಾಲ ಸಾರ್ವಜನಿಕ ಜೀವನದಲ್ಲಿ ಇದ್ದಂತಹವರು. ಆಂಧ್ರದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ದೀರ್ಘ ಕಾಲ ರಾಜಕಾರಣ ಮಾಡಿ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಒಂದು ಛಾಪನ್ನು ಬಿಟ್ಟು ಹೋಗಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು ಅವರು ಪ್ರಧಾನ ಮಂತ್ರಿಯಾಗಿರುವವರೆಗೆ ಮತ್ತು ಬದುಕಿರುವವರೆಗೆ ಕೂಡ ದೇಶದ ಬಗ್ಗೆ ಮತ್ತು ಸಮಾಜದ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡಿದವರು. ಇವರು ಪ್ರಧಾನ ಮಂತ್ರಿಯಾಗಿದ್ದಾಗಲೇ ಈ ದೇಶಕ್ಕೆ ಒಂದು ಹೊಸ ಆರ್ಥಿಕ ಕೀರ್ತಿಯನ್ನು ತಂದಂತವರು ಆದಾದ ಮೇಲೆ ಹೆಚ್ಚು ಹೆಚ್ಚಿಗೆ ಈ ದೇಶಕ್ಕೆ ಖಾಸಗಿ ಬಂಡವಾಳ ದೇಶ ವಿದೇಶಗಳಿಂದ ಬರಲಿಕ್ಕೆ ಸಾಧ್ಯವಾದುದು. ಆ ಹೊಸ ಆರ್ಥಿಕ ನೀತಿಯಿಂದ ಭಾರತದ ಆರ್ಥಿಕ ಕ್ಷೇತ್ರದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು ಎನ್ನತಕ್ಕಂಥದ್ದನ್ನು ಇವತ್ತು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅದರ ರೂವಾರಿ ಪಿ.ವಿ. ನರಸಿಂಹರಾವ್‌ರವರು ಎನ್ನುವುದನ್ನು ಇವತ್ತು ನಾವು ನೆನಪಿಸಿಕೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅವರು ಬರೀ ರಾಜಕಾರಣಿ ಅಷ್ಟೇ ಆಗಿರಲಿಲ್ಲ. ಬಹು ಭಾಷಾ ವಿದ್ವಾಂಸರಾಗಿದ್ದರು. ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಸ್ವತಃ ಅವರೇ ಸಾಹಿತಿಯಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆಯನ್ನು ಕೂಡ ಕೊಟ್ಟಿರುವವರು. ಬಹುಶಃ ಇಷ್ಟೊಂದು ಬಹುಮುಖ ಪ್ರತಿಭೆಯನ್ನು ಪಡೆದುಕೊಂಡಿರುವ ರಾಜಕಾರಿಣಿಗಳು ಭಾರತದ

---

†ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಈ ಭಾಷಣವು ಪರಿಷ್ಕರಿಸ್ಪತ್ತಿದೆ

ರಾಜಕೀಯ ಕ್ಷೇತ್ರದಲ್ಲಿ ಇರತಕ್ಕಂಥದ್ದು ವಿರಳ ಎಂದು ನಾನು ಭಾವಿಸಿಕೊಂಡಿದ್ದೇನೆ. ಅಷ್ಟೊಂದು ಬಹುಮುಖ ಪ್ರತಿಭೆಯನ್ನು ಹೊಂದಿರುವಂತಹ ಒಬ್ಬ ಹಿರಿಯ ವ್ಯಕ್ತಿ ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಇವರ ಸಾವಿನಿಂದ ದೇಶಕ್ಕೆ ಅಪಾರವಾದ ನಷ್ಟವಾಗಿದೆ ಎಂದು ಹೇಳುತ್ತಾ, ಅವರ ಆತ್ಮಕ್ಕೆ ಚಿರ ಶಾಂತಿ ದೊರಕಲಿ ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸುತ್ತೇನೆ. ಕೋಲೂರು ಮಲ್ಲಪ್ಪನವರು 1957ನೇ ಇಸವಿಯಲ್ಲಿ ಈ ಮನೆಯ ಸದಸ್ಯರಾಗಿದ್ದರು. ಮೂರು ಸಾರಿ ರಾಜ್ಯ ಸಭೆಯ ಸದಸ್ಯರಾಗಿ ಕೂಡ ಕೆಲಸ ಮಾಡಿದ್ದರು. ಕೋಲೂರು ಮಲ್ಲಪ್ಪನವರ ಬಗ್ಗೆ ನಾವು ನೆನಪಿಸಿಕೊಳ್ಳಬೇಕಾದುದು ಅವರು ಆವತ್ತು ಗಾಂಧೀಜಿಯವರಿಂದ ಪ್ರೇರೇಪಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ, ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು, ಅವತ್ತಿನಿಂದ ಬದುಕಿರುವವರೆಗೆ ಕೂಡ ಗಾಂಧಿವಾದಿಯಾಗಿ ಬದುಕಿದ್ದರು. ಇದು ಬಹಳ ಕಷ್ಟದ ಕೆಲಸ. ಎಲ್ಲರೂ ಗಾಂಧಿವಾದದ ಬಗ್ಗೆ ಮಾತನಾಡುವುದು ಸುಲಭ . ಉದ್ದನೆ ಭಾಷಣ ಮಾಡುವುದು ಸುಲಭ. ಆದರೆ ಸ್ವತಃ ಬದುಕಿನಲ್ಲಿ ಗಾಂಧಿ ತತ್ವವನ್ನು ಅಳವಡಿಸಿಕೊಂಡು ಗಾಂಧಿವಾದಿಯಾಗಿ ಉಸಿರು ಇರುವವರೆಗೆ ಬದುಕಿರುತ್ತಾರೆ, ಇದನ್ನು ನಾವೆಲ್ಲಾ ಬಹಳ ಮೆಚ್ಚಬೇಕಾದುದು. ಇದು ನಮಗೆಲ್ಲಾ ಆದರ್ಶವಾಗಬೇಕಾದುದು ಎಂದು ನಾವು ನೆನೆಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರು ಬಿಟ್ಟು ಹೋಗಿರತಕ್ಕಂತಹ ಈ ಆದರ್ಶ ನಮಗೆ ಮತ್ತು ಎಲ್ಲಾ ಯುವ ಪೀಳಿಗೆಗೆ ಅದು ದಾರಿದೀಪವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ಅವರ ಆತ್ಮಕ್ಕೆ ಕೂಡ ಶಾಂತಿ ದೊರಕಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ನಿಟ್ಟೂರು ಶ್ರೀನಿವಾಸರಾವ್ ಅವರು ಮೈಸೂರು ರಾಜ್ಯದ ಹೈಕೋರ್ಟಿನ ಮುಖ್ಯ ನ್ಯಾಯಾಮೂರ್ತಿಯಾಗಿ ಕೆಲಸ ಮಾಡಿದರು. ನಿವೃತ್ತಿ ಆದ ಮೇಲೆ ಕೂಡ ಬಹುಶಃ ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ಏನೇನು ಜನಪರವಾದ ಹೊರಾಟಗಳು ಆಗುತ್ತಿದ್ದವು ಆ ಎಲ್ಲಾ ಹೋರಾಟಗಳಲ್ಲಿ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡು, ಎಲ್ಲ ಹೋರಾಟಗಳಲ್ಲಿ ಕೂಡ ಕೊನೆಯ ಗಳಿಗೆಯವರೆಗೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರು ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗಿಯಾಗುವಂತಹವರು, ದೇಶದ ಬಗ್ಗೆ ಅಪಾರವಾದ ದೇಶ ಪ್ರೇಮ ಇಟ್ಟುಕೊಂಡಿರುವವರು. ಈ ಮೌಲ್ಯಗಳು ಯುವ ಪೀಳಿಗೆಗೆ ಅತ್ಯಂತ ಅಗತ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ದೇಶ ಪ್ರೀತಿಸತಕ್ಕಂತಹ ಜನರನ್ನು ಪ್ರೀತಿಸತಕ್ಕಂತಹ ಜನಪರವಾದ ಕಾಳಜಿ ಇಟ್ಟುಕೊಂಡು ಕೆಲಸ ಮಾಡುವುದು ಇದೂ ಕೂಡ ಸಮಾಜಕ್ಕೆ ಬಹಳ ಅಗತ್ಯ ಇದೆ. ಇಂತಹ ಒಂದು ಆದರ್ಶವನ್ನು ಬಿಟ್ಟು ಹೋಗಿದ್ದಾರೆ, ಈ ಆದರ್ಶ ನಮಗೆಲ್ಲಾ ಮಾರ್ಗದರ್ಶನವಾಗುತ್ತದೆ ಎಂಬ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಾ ಅವರ ಆತ್ಮಕ್ಕೆ ಕೂಡ ಶಾಂತಿ ಸಿಗಲಿ, ಅವರು ಬಹುಶಃ 99 ವರ್ಷ ಬದುಕಿದ್ದರು. 100ನೇ ವರ್ಷಕ್ಕೆ ಕಾಲಿಟ್ಟಿದ್ದರು. ಶತಾಯ ಪೂರ್ಣ ಮುಗಿಸದೆ ಇದ್ದರೂ ಕೂಡ 100ನೇ ವರ್ಷಕ್ಕೆ ಕಾಲು ಇಟ್ಟು ತುಂಬು ಜೀವನ ಬಾಳಿ ಬದುಕನ್ನು ಸಾರ್ಥಕ ಮಾಡಿಕೊಂಡು ಅನೇಕ ಯುವ ಪೀಳಿಗೆಗೆ ಅಗತ್ಯ ಇರುವಂತಹ ಬದುಕಿನ ಆದರ್ಶಗಳನ್ನು ಮತ್ತು ಬದುಕಿನ ಮೌಲ್ಯಗಳನ್ನು ಅವರ ಬದುಕಿನಲ್ಲಿ ಮಾಡಿದ್ದನ್ನು ಬಿಟ್ಟು ಹೋಗಿದ್ದಾರೆ. ಅದು ನಮಗೆ ಮಾರ್ಗದರ್ಶನ ಎನ್ನತಕ್ಕಂತಹ ಮಾತನ್ನು ಹೇಳಿ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಬಯಸುತ್ತೇನೆ. ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ಇಡೀ ಜಗತ್ತಿನಲ್ಲಿ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಇಡೀ ಜಗತ್ತಿನಲ್ಲಿ ದೇಶ ವಿದೇಶಗಳಲ್ಲಿ ಹಾಡಿ ಕೋಟ್ಯಾಂತರ ಜನರ ಮನಸ್ಸು ಗೆದ್ದಿದ್ದಂತಹ ಒಬ್ಬ ವ್ಯಕ್ತಿ ಎನ್ನತಕ್ಕಂಥದ್ದನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಸಂಗೀತ ಕ್ಷೇತ್ರಕ್ಕೆ ಇವರು ಕೊಟ್ಟಿರತಕ್ಕಂತಹ ಕೊಡುಗೆ ಬಹಳ

ಅಪಾರವಾದುದು. ಅದಕ್ಕೋಸ್ಕರ ಕರ್ನಾಟಕ ಸಂಗೀತಕ್ಕೆ ಇವರು ಕೊಟ್ಟಿರತಕ್ಕಂತಹ ಕೊಡುಗೆಯನ್ನು ಗುರುತಿಸಿ "ಭಾರತ ರತ್ನ" ಬಿರುದನ್ನು ಕೊಟ್ಟಿದ್ದಾರೆ. "ಭಾರತ ರತ್ನ" ಬಿರುದು ಪಡೆದು ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಹೆಜ್ಜೆಗಳನ್ನು ಇಟ್ಟು ಅನೇಕ ವರ್ಷಗಳ ವರೆಗೆ ಬಿಟ್ಟು ಹೋಗತಕ್ಕಂತಹ ಒಂದು ಅಪಾರವಾದ ಸೇವೆಯನ್ನು ಅವರು ಮಾಡಿದ್ದಾರೆ. ಸಂಗೀತ ಕ್ಷೇತ್ರಕ್ಕೆ ಅವರು ಮಾಡಿರುವಂತಹ ಸೇವೆಯನ್ನು ನಿಜವಾಗಿಯೂ ಎಲ್ಲರೂ ಒಪ್ಪಿಕೊಳ್ಳತಕ್ಕಂಥದ್ದು, ಅದನ್ನು ಗುರುತಿಸತಕ್ಕಂಥದ್ದು ಎಂದು ಹೇಳುತ್ತಾ, ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಡಾ॥ ರಾಜಾರಾಮಣ್ಣರವರು ಇಡೀ ದೇಶದಲ್ಲಿ ಎಲ್ಲರಿಗೂ ಗೊತ್ತಿರತಕ್ಕಂತಹ ವ್ಯಕ್ತಿ ಅಣ್ವಸ್ತ್ರ ಕ್ಷೇತ್ರದಲ್ಲಿ ಅಪಾರವಾದ ಹೆಸರನ್ನು ಗಳಿಸಿ, ರಾಷ್ಟ್ರ ಮತ್ತು ರಾಜ್ಯ ಹೆಮ್ಮೆ ಪಡತಕ್ಕಂತಹ ಕೆಲಸ ಮಾಡಿದಂತಹವರು. ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆಯಲ್ಲಿ ಇವರದೂ ಕೂಡ ದೊಡ್ಡ ಕೊಡುಗೆ ಇದೆ ಎನ್ನತಕ್ಕಂಥದ್ದನ್ನು ಇವತ್ತು ನಾವು ನೆನೆಪಿಸಿಕೊಳ್ಳಬೇಕಾಗುತ್ತದೆ. ವಿಜ್ಞಾನ ಕ್ಷೇತ್ರದಲ್ಲಿ ಅಣ್ವಸ್ತ್ರ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿ ಸಾರ್ವಜನಿಕ ಕ್ಷೇತ್ರದಲ್ಲಿ ಕೂಡ ಕೆಲಸ ಮಾಡಿದ್ದಾರೆ. ಎರಡು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿ ಕೇಂದ್ರದಲ್ಲಿ ಮಂತ್ರಿಯಾಗಿ ಕೂಡ ಕೆಲಸ ಮಾಡಿದ್ದಾರೆ. ಅವರು ಇತ್ತೀಚೆಗೆ ನಮ್ಮ ಎಲ್ಲಾ ಅನೇಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕೊನೆಯವರೆಗೆ ಕೂಡ ಕೆಲಸ ಮಾಡುತ್ತಾ ನಮ್ಮ ಜೊತೆಯಲ್ಲಿ ಇದ್ದವರು. ಅವರು ಇವತ್ತು ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ಇವರಲ್ಲದೆ ಅನೇಕ ಜನರು ಈ ಮನೆಯ ಸದಸ್ಯರಾಗಿದ್ದರು. ಶಾಸಕರಾದ ಚಿಣ್ಣಪ್ಪನವರು, ಸಾಗರನಹಳ್ಳಿ ರೇವಣ್ಣನವರು ಮಂತ್ರಿಯಾಗಿದ್ದರು. 1984-85ನೇ ಇಸವಿಯಲ್ಲಿ ಮಂತ್ರಿಯಾಗಿದ್ದರು. ನಮ್ಮ ಜೊತೆಯಲ್ಲಿ ಮಂತ್ರಿಯಾಗಿ ಕೆಲಸ ಮಾಡಿದವರು. ಅವರೂ ಕೂಡ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಎಸ್.ಆರ್. ಲಕ್ಷ್ಮಯ್ಯನವರು ಮೂರು ಸಾರಿ ಈ ಮನೆಯ ಶಾಸಕರಾಗಿದ್ದರು. ನಮ್ಮ ಜೊತೆಯಲ್ಲಿ ಮೂರು ಸಾರಿ ಕೆಲಸ ಮಾಡಿದವರು. ಚಿಕ್ಕಮಗಳೂರು ಜಿಲ್ಲೆಯವರಾದ ಇವರು, ಬಹುಶಃ ಸದನ ನಡೆಯುವಾಗ ಲಕ್ಮಯ್ಯನವರು ಚಿಕ್ಕಮಗಳೂರು ಜಿಲ್ಲೆಯವರಾದ ಇವರು, ಬಹುಶಃ ಸದನ ನಡೆಯುವಾಗ ಲಕ್ಷ್ಮಯ್ಯನವರು ಇಲ್ಲಿದ್ದಾರೆಂದರೆ ಅವರು ಎಲ್ಲರಿಗೂ ಕೂಡ ಗೊತ್ತಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು ಬಹಳ ನೇರ ನಡೆ ನುಡಿಯ ವ್ಯಕ್ತಿಯಾಗಿದ್ದರು. ಯಾವುದೇ ಸಂದರ್ಭದಲ್ಲಿ ಬಹಳ ಗಟ್ಟಿಯಾಗಿ ಮಾತನಾಡುವ ಸ್ವಭಾವವನ್ನು, ನೇರವಾಗಿ ಮಾತನಾಡುವ ಸ್ವಭಾವವನ್ನು ಬೆಳೆಸಿಕೊಂಡಿದ್ದರು. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ಅವರ ಮಗನಾದ ಶ್ರೀ ಧರ್ಮೇಗೌಡರು ನಮ್ಮ ಜೊತೆ ಮಾನ್ಯ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದಾರೆ. ಆರ್.ಡಿ. ಕಿತ್ತೂರು, ಚಿಣ್ಣಪ್ಪ ಮಂತ್ರಿಗಳಾಗಿದ್ದವರು ಶ್ರೀಮತಿ ಅನ್ನಪೂರ್ಣಮ್ಮನವರು ಪ್ರಜಾಪ್ರತಿನಿಧಿಸಭೆ ಸದಸ್ಯರಾಗಿದ್ದರು. ಅಮ್ಮಣ್ಣರವರು, ದೇಸಾಯಿಯವರು, ಬಿಳಿಗೌಡ, ಗಂಗಾಭೋವಿಯವರು, ನಾರಾಯಣಪ್ಪ, ರಾಮದಾಸ್, ಕೆಂಚಪ್ಪ, ಶಂಕರಮೊಕಾಶಿ ಪುಣೇಕರ್ ಇವರು ಸಾಹಿತಿಗಳು. ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದವರು, ಇವರೂ ಕೂಡ ಕಾಲವಾಗಿದ್ದಾರೆ. ಇವೆಲ್ಲದರ ಜೊತೆಗೆ ಸುನಾಮಿ ದುರಂತ ಏನು ಸಂಭವಿಸಿತು ಇದು ಈ ಶತಮಾನದ ಘೋರ ದುರಂತವಾಗಿದೆ. ಈಗಾಗಲೇ ಎಲ್ಲರೂ ಇದರ ಬಗ್ಗೆ ಬಣ್ಣಿಸಿದ್ದಾರೆ. ಈ ದುರಂತದಲ್ಲಿ ಸಾವಿರಾರು ಜನರು ಸಾವುನೋವಿಗೆ ತುತ್ತಾದರು, ಅಸ್ತಿಪಾಸ್ತಿಗಳನ್ನು ಕಳೆದು ಕೊಂಡರು. ಒಂದು ನಾವು ಇವೊತ್ತು ಮೆಚ್ಚಬೇಕಾದುದು ಎಂದರೆ ದುರಂತ

ನಡೆದ ಸ್ಥಳಕ್ಕೆ ಸಹಾಯ ಮಾಡಲು ಜನರು ಜಾತಿ, ಧರ್ಮ ಎಂಬುದನ್ನೆಲ್ಲಾ ಮರೆತು ದುರಂತ ಸ್ಥಳದಲ್ಲಿ ನೊಂದ ಜನರಿಗೆ ಸಹಾಯ ಮಾಡುತ್ತಿದ್ದಾರೆ. ಇದನ್ನು ನಾವೆಲ್ಲರೂ ಇಂದು ಮೆಚ್ಚಬೇಕಾದುದೇ ಆಗಿದೆ. ದೇಶವಿದೇಶಗಳಿಂದ ಸಹಾಯಗಳು ಬಂದಿವೆ. ಅಷ್ಟು ಜನರು ಸ್ವಯಂಪ್ರೇರಿತರಾಗಿ ಸತ್ತ, ನೊಂದ ಕುಟುಂಬಗಳವರಿಗೆ ಸಹಾಯ ಮಾಡಲು ನಿಂತಿದ್ದಾರಲ್ಲಾ , ಅದನ್ನು ಮೆಚ್ಚಬೇಕಾಗಿದೆ. ನೊಂದ ಕುಟುಂಬಗಳವರಿಗೆ ಸಹಾಯ ಮಾಡಲು ನಿಂತಿದ್ದಾರಲ್ಲಾ, ಅದನ್ನು ಮೆಚ್ಚಬೇಕಾಗಿದೆ. ಏಕೆಂದರೆ ಇದು ಬಹಳ ದೊಡ್ಡ ಕೆಲಸವಾಗಿದ್ದು ಪರಿಹಾರದ ಕಾರ್ಯದಲ್ಲಿ ಇಷ್ಟೊಂದು ಜನರು ತೊಡಗಿಸಿಕೊಂಡಿರುವುದು ದೊಡ್ಡ ಬೆಳವಣಿಗೆಯೇ ಆಗಿದೆ. ಕರ್ನಾಟಕ ಸರ್ಕಾರ ಕೂಡ ಕೈಲಾದ ಮಟ್ಟಿಗೆ ನೊಂದ ಕುಟುಂಬದವರಿಗೆ ಸಹಾಯ ಮಾಡುವಂಥ ಕೆಲಸವನ್ನು ಮಾಡಿದೆ. ಇವೆಲ್ಲದರ ಜೊತೆಗೆ ಕರ್ನಾಟಕದಲ್ಲಿ ಇಂದಿಗೂ ಕೂಡ ಸಾಮಾನ್ಯ ಜನರು ಅನೇಕ ರೀತಿಯ ಸಹಾಯವನ್ನು ಕೊಡುತ್ತಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಅಲ್ಲಿಗೆ ಕಳುಹಿಸತಕ್ಕಂಥ ಕೆಲಸವಾಗುತ್ತಿದೆ. ಇದರ ಜೊತೆ ಅಲ್ಲಿ ನೊಂದ ಕುಟುಂಬದವರಿಗೆ ಸಹಾಯ ಮಾಡಬೇಕು ಎನ್ನುವ ಮನಸ್ಸು ಜನರಿಗೆ ಏನು ಬಂದಿದೆಯಲ್ಲ, ಆ ಜನರ ಮನಸ್ಸಿನ ತುಡಿತ ಏನಿದೆಯಲ್ಲಾ ಅದನ್ನು ನಾವು ಮೆಚ್ಚಬೇಕಾದುದೇ ಆಗಿದೆ. ಇಂಥ ಘೋರ ದುರಂತವಾಗಿರುವಾಗಿರುವಾಗ ಸಹಾಯ ಮಾಡಬೇಕು ಎನ್ನುವ ಭಾವನೆಗಳು ಜನರಲ್ಲಿ ಬಂದಿರತಕ್ಕಂಥದ್ದು ಬಹಳ ಸ್ವಾಗತಾರ್ಹವಾದ ವಿಚಾರವಾಗಿದೆ. ಇವೊತ್ತು ಕರ್ನಾಟಕದ ಜನರೂ ಕೂಡ ಸುಮಾರು ಆಸ್ತಿಪಾಸ್ತಿಗಳನ್ನು ಈ ದುರಂತದಲ್ಲಿ ಕಳೆದುಕೊಂಡಿದ್ದಾರೆ. ಸುನಾಮಿ ದುರಂತ ಸಡೆದಾಗ ಅಲ್ಲಿಗೆ ಪ್ರವಾಸಕ್ಕೆಂದು ಹೋದ ಕರ್ನಾಟಕದ ಜನರು ಸತ್ತಿದ್ದಾರೆ. ಕರ್ನಾಟಕದವರೇ ಮಂಗಳೂರಿನಲ್ಲಿ ಇಬ್ಬರು ಸತ್ತಿದ್ದಾರೆ, ನಾನು ಮತ್ತು ಮುಖ್ಯಮಂತ್ರಿಗಳು ಹೋಗಿದ್ದೆವು. ಸಮುದ್ರದ ಹತ್ತಿರ ಕುಳಿತಿದ್ದವರು ಇಬ್ಬರು ಸತ್ತಿದ್ದಾರೆ. ಇಂದು ಈ ರೀತಿಯ ದುರಂತದಲ್ಲಿ ನೊಂದ ಕುಟುಂಬಗಲವರಿಗೆ ಎಲ್ಲರೂ ಸಹಾಯ ಮಾಡಬೇಕಾದ ಅಗತ್ಯತೆ ಇದೆಯೆಂದು ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ನಾವು ನೀವೆಲ್ಲರೂ ಈ ಸುನಾಮಿ ದುರಂತದಲ್ಲಿ ಮೃತ ಪಟ್ಟವರ ಕುಟುಂಬದವರಿಗೆ ಆರ್ಥಿಕವಾಗಿ ಸಹಾಯ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಇಂಥ ದುರಂತ ಮತ್ತೊಂದು ಮರುಕಳಿಸಬಾರದು ಎನ್ನುವ ಹಾಗೆ ಮಾಡಲು ನಾವೆಲ್ಲರೂ ಕೂಡ ಚಿಂತನೆಯನ್ನು ಮಾಡಬೇಕಾಗಿದೆ. ಇಂಥ ದುರಂತ ರಾಜ್ಯದಲ್ಲಿಯೇ ಆಗಲಿ, ಇಡೀ ದೇಶದಲ್ಲಿಯೇ ಆಗಲಿ ಎಲ್ಲೂ ಕೂಡ ಆಗಬಾರದು. ಏಕೆಂದರೆ ಈ ಸುನಾಮಿ ಮುನ್ಸೂಚನೆ ಇಲ್ಲದೇ ಜಲಪ್ರಳಯ ಆಗುವುದು ಸಾವಿರಾರು ಜನರು ಗೊತ್ತಿಲ್ಲದೇ ಸಾವಿಗೀಡಾಗುತ್ತಾರೆ. ಆದುದರಿಂದ ಸುನಾಮಿ ಬಗ್ಗೆ ಮುನ್ಸೂಚನೆಯನ್ನು ಪತ್ತೆ ಹೆಚ್ಚತಕ್ಕಂಥ ಕೆಲಸವಾಗಬೇಕಗಿದೆ. ಇದರ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಚರ್ಚೆ ಮಾಡಬೇಕು ಮತ್ತು ಮುನ್ಸೂಚನೆಯ ಪತ್ತೆ ಕಂಡುಹಿಡಿಯಬೇಕಾದ ಅವಶ್ಯಕತೆ ಇದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಾ ಸುನಾಮಿ ದುರಂತದಲ್ಲಿ ಯಾರ್‍ಯಾರು ಸಾವನ್ನಪ್ಪಿದ್ದಾರೆ ಅವರೆಲ್ಲರ ಆತ್ಮಕ್ಕೆ ಶಾಂತಿ ದೊರಕಲೆಂದು ಆಶಿಸುತ್ತೇನೆ, ಎಂದು ಹೇಳಿ ಮಾನ್ಯ ಸಭಾಧ್ಯಕ್ಷರು ತಂದಿರುವ ಸಂತಾಪ ಸೂಚಕ ನಿರ್ಣಯವೇನಿದೆ ಅದನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** :- ಮಾನ್ಯ ಅಧ್ಯಕ್ಷರೆ, ಸುಮಾರು ಹದಿನೆಂಟು ಮಹನೀಯರುಗಳು ದೈವಾಧೀನರಾಗಿರುವವರಿಗೆ ತಾವು ಸಂತಾಪ ಸೂಚನೆ ನಿರ್ಣಯವನ್ನು ಮಂಡನೆ ಮಾಡಿದ್ದೀರಿ. ಅವರುಗಳೆಂದರೆ ಶ್ರೀ ಪಿ.ವಿ. ನರಸಿಂಹರಾವ್, ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ, ಶ್ರೀ ನಿಟ್ಟೂರು ಶ್ರೀನಿವಾಸರಾವ್, ಶ್ರೀ ಕೋಲೂರು ಮಲ್ಲಪ್ಪ,

ಡಾ॥ ರಾಜಾರಾಮಣ್ಣ, ಶ್ರೀ ಡಿ.ಎ. ಚಿಣ್ಣಪ್ಪ, ಶ್ರೀ ಸಾಗರನಹಳ್ಳಿ ರೇವಣ್ಣ, ಶ್ರೀ ಆರ್.ಡಿ. ಕಿತ್ತೂರು, ಶ್ರೀಮತಿ ಅನ್ನಪೂರ್ಣಮ್ಮ, ಶ್ರೀ ಜೆ.ಎಸ್. ಅಮ್ಮಣ್ಣವರ್, ಶ್ರೀ ಎಸ್.ಆರ್. ಲಕ್ಷ್ಮಯ್ಯ, ಶ್ರೀ ಎ.ಎ. ದೇಸಾಯಿ, ಶ್ರೀ ಎ.ಡಿ. ಬಿಳಿಗೌಡ, ಶ್ರೀ ಗಂಗಾಭೋವಿ, ಶ್ರೀ ಕೆ. ನಾರಾಯಣಪ್ಪ, ಶ್ರೀ ಜಿ. ರಾಮದಾಸ್, ಶ್ರೀ ಆರ್. ಕೆಂಚಪ್ಪ, ಶ್ರೀ ಶಂಕರ ಮೊಕಾಶಿ ಪುಣೇಕರ,. ಇವರುಗಳೆಲ್ಲರೂ ಕೂಡ ಅವರುಗಳದ್ದೇ ಆದಂಥ ಕೆಲಸವನ್ನು ರಾಜ್ಯಕ್ಕಾಗಿ, ದೇಶಕ್ಕಾಗಿ ಮಾಡಿದ್ದಾರೆ. ಇವರುಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಇಂದು 18 ಜನರು ಈಗಾಗಲೇ ಮೃತ ಪಟ್ಟವರಿಗಾಗಿ ಸಂತಾಪ ಸೂಚನೆ ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಶಾಸನಸಭೆಯನ್ನು ಆಗಾಗ ಕರೆದರೆ ಇಷ್ಟೊಂದು ಸಂಖ್ಯೆಯಲ್ಲಿ ಮೃತಪಟ್ಟವರ ಪಟ್ಟಿ ಬರುವುದಿಲ್ಲ. ಮಾನ್ಯ ಅಧ್ಯಕ್ಷರು ಗಮನಿಸಬೇಕು. ಆಗಾಗ ಶಾಸನಸಭೆ ಸೇರಬೇಕು. ವರ್ಷಕ್ಕೆ ಒಂದು ಸಾರಿ ಶಾಸನಸಭೆ ಸೇರಿದರೆ ಮೃತಪಟ್ಟವರ ಪಟ್ಟಿಯಲ್ಲಿ 50 ಜನರೂ ಇರುವ ಸಂಭವವೇ ಇರುತ್ತದೆ. ಆದಕಾರಣ ಶಾಸನಸಭೆ ಬಹಳ ಬೇಗ ಬೇಗ ಸೇರುತ್ತಿರಬೇಕು ಎಂದು ಹೇಳಬಯಸುತ್ತೇನೆ. ಈಗ ನೀವು ಶಾಸನಸಭೆಯನ್ನು ಕರೆದು ಸಂತಾಪ ಸೂಚನೆ ನಿರ್ಣಯ ಮಂಡಿಸಿದ್ದೀರಿ. ಈಗಾಗಲೇ ಮೃತಪಟ್ಟಿರುವವರ ಕುಟುಂಬದವರೇ ಘಟನೆಯನ್ನು ಮರೆತುಬಿಟ್ಟಿದ್ದಾರೆ. ಹೀಗಿರುವಾಗ ನಾವು ಇಲ್ಲಿ ಸಂತಾಪ ಸೂಚನೆ ಮಂಡಿಸುವ ಮೂಲಕ ಮತ್ತೆ ಅವರ ಕುಟುಂಬದವರಿಗೆ ದುಃಖ ತರುತ್ತಿದ್ದೇವೆ. ಆದಕಾರಣ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾಟಾಚಾರಕ್ಕೆ ಸಂತಾಪ ಸೂಚನೆ ನಿರ್ಣಯ ತರುತ್ತಿದ್ದೇವೆ ಎನ್ನುವಹಾಗೆ ಆಗಬಾರದು. ಶಾಸನಸಭೆ ಬೇಗ ಬೇಗ ಸೇರುವುದಕ್ಕೆ ಆಗದಿದ್ದರೆ ದೇಶಕ್ಕೆ ತ್ಯಾಗ ಮಾಡಿದ ಬಹಳ ಹಿರಿಯರು ದೈವಾಧೀನರಾದಾಗ ಒಂದು ದಿನದ ಮಟ್ಟಿಗೆ ತುರ್ತು ಅಧಿವೇಶನ ಕರೆದು ಸಂತಾಪ ಸೂಚನೆ ನಿರ್ಣಯವನ್ನು ಮಂಡಿಸಿದರೆ ಬಹಳ ಸೂಕ್ತ ಎಂದು ನಾನು ತಮಗೆ ಹೇಳಬಯಸುತ್ತೇನೆ. ಮಾನ್ಯ ನರಸಿಂಹರಾವ್‌ರವರು ನಮ್ಮ ದೇಶಕ್ಕೆ ಆರ್ಥಿಕವಾಗಿ ಒಳ್ಳೆಯ ಹೆಸರನ್ನು ತಂದಂಥವರಾಗಿದ್ದರು. ಇನ್ನು ಶ್ರೀಮತಿ ಸುಬ್ಬುಲಕ್ಷ್ಮಿಯವರು ಕರ್ನಾಟಕ ಒಂದೇ ಅಲ್ಲ, ದೇಶ ವಿದೇಶಗಳಲ್ಲಿ ಸಂಗೀತದಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಪ್ರದರ್ಶಿಸಿ ಹೆಸರು ಗಳಿಸಿ ಪ್ರಖ್ಯಾತಿಯನ್ನು ಪಡೆದಿದ್ದಂಥವರಾಗಿದ್ದರು. ಇನ್ನು ಶ್ರೀ ಕೋಲೂರು ಮಲ್ಲಪ್ಪನವರಂತೂ ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಬಹಳ ಎತ್ತರವಾಗಿ ಬೆಳೆದಂಥವರಾಗಿದ್ದರು. ಮಾನ್ಯ ನಿಜಲಿಂಗಪ್ಪನವರು ಮತ್ತು ಅವರುಗಳ ಕಡೆಯವರು ಒಂದು ಗುಂಪಾದರೆ, ಮಾನ್ಯ ಬಿ.ಡಿ. ಜತ್ತಿ ಮತ್ತು ಕೋಲೂರು ಮಲ್ಲಪ್ಪನವರದ್ದೇ ಒಂದು ಗುಂಪು ಇತ್ತು. ಬಹಳ ದೊಡ್ಡ ವ್ಯಕ್ತಿತ್ವವನ್ನು ಕೋಲೂರು ಮಲ್ಲಪ್ಪನವರು ಹೊಂದಿದ್ದರು. ನಾವು ಅವರಿಗೆ ಬೆಂಗಳೂರು ನಗರದಲ್ಲಿ ಸಂಗೊಳ್ಳಿ ರಾಯಣ್ಣ ಪ್ರಶಸ್ತಿಯನ್ನು ಕೊಡಿಸಿದೆವು. ಏಕೆಂದರೆ ಅವರು ಬಹಳ ಆದರ್ಶವಾದಂಥ ದೊಡ್ಡ ರಾಜಕಾರಣಿಯಾಗಿದ್ದುದರಿಂದ ಈ ಪ್ರಶಸ್ತಿಯನ್ನು ಕೊಡಿಸಿದೆವು. ಇನ್ನು ಆರ್.ಡಿ. ಕಿತ್ತೂರ್‌ರವರು ದೇವರಾಜು ಅರಸುರವರ ಕಾಲದಲ್ಲಿ ಮಂತ್ರಿಯಾಗಿದ್ದರು. ಆಗ ರಾಜಾರಾವ್ ಎನ್ನುವ ಪತ್ರಕರ್ತರು ಸಂಯುಕ್ತ ಕರ್ನಾಟಕದಲ್ಲಿ ವರದಿ ಮಾಡಿ ಆರ್.ಡಿ. ಕಿತ್ತೂರವರ ಮನೆಯಲ್ಲಿ ಒಬ್ಬ ಹೆಣ್ಣು ಮಗಳು ಇದ್ದಳು ಎಂದು ಹೇಳಿದ್ದರು. ಇದು ಅಂದು ಒಂದು ದೊಡ್ಡ ದಾಂಧಲಿ ಆಯಿತು. ಆರ್.ಡಿ. ಕಿತ್ತೂರ್‌ರವರು ರಾಜೀನಾಮೆಯನ್ನೇ ಕೊಟ್ಟುಬಿಟ್ಟರು. ಅವರಂಥ ಆ ಆದರ್ಶವನ್ನು ಈಗಿನವರು ಪಾಲನೆ ಮಾಡುವುದಕ್ಕೆ ಹೊದರೆ ಬಹಳ ಜನರು ರಾಜೀನಾಮೆಯನ್ನು ಕೊಟ್ಟುಬಿಡಬೇಕಾಗುತ್ತದೆ. ಆ ರೀತಿಯ ಆದರ್ಶವನ್ನು ಇಂದು ನೋಡುವುದಕ್ಕಾಗುವುದಿಲ್ಲ ಬಿಡಿ. ಅಂದು ಒಳ್ಳೆಯ ಆದರ್ಶ ಹಿರಿಯ ಪತ್ರಕರ್ತರಾದ ರಾಜಾರಾವ್‌ರವರು ಸಂಯುಕ್ತ ಕರ್ನಾಟಕದಲ್ಲಿ ಆರ್.ಡಿ. ಕಿತ್ತೂರ್‌ರವರ ಮನೆಯಲ್ಲಿ ಒಬ್ಬ ಹೆಣ್ಣು

ಮಗಳು ಇದ್ದಳು ಎಂದು ಬರೆದಿದ್ದನ್ನು ನಾನೇ ಇಲ್ಲಿ ಪ್ರಸ್ತಾಪ ಮಾಡಿದೆ. ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ಈಗ ತರುತ್ತಿದ್ದೇನೆ. ನಾನು ಅಂದು ಈ ವಿಷಯವನ್ನು ಪ್ರಸ್ತಾಪ ಮಾಡಿದ ತಕ್ಷಣ ದೇವರಾಜು ಅರಸುರವರ ಸಂಪುಟದಲ್ಲಿದ್ದ ಶ್ರೀ ಆರ್.ಡಿ. ಕಿತ್ತೂರ್‌ರವರು ತಕ್ಷಣ ರಾಜೀನಾಮೆಯನ್ನು ಕೊಟ್ಟರು. ಈಗ ಅಂಥದ್ದು ಇದ್ದರೂ ನಾವು ಹೇಳುವುದಕ್ಕೆ ಹೋದರೆ ಇಡೀ ಸಚಿವ ಸಂಪುಟವೇ ರಾಜೀನಾಮೆ ಕೊಡಬೇಕಾಗುಬಹುದು. ಆದರೆ ಆ ರೀತಿ ರಾಜೀನಾಮೆ ಕೊಡುವುದಕ್ಕೆ ಆಗುವುದಿಲ್ಲ. ಅದು ಕಷ್ಟವಾಗುತ್ತದೆ. ಆದ್ದರಿಂದ ಕೆಲವು ವಿಚಾರಗಳನ್ನು ನಾವು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಆದರೆ ಅಂದು ನಡೆದ ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಡಾ॥ ರಾಜಾರಾಮಣ್ಣನವರಂತೂ ನಮ್ಮ ರಾಜ್ಯಕ್ಕೇ ದೊಡ್ಡ ಮುಕುಟ. ಹಿಮಾಲಯದ ಎತ್ತರಕ್ಕೆ ಬೆಳೆದಂಥವರಾಗಿದ್ದರು. ಇನ್ನು ನಮ್ಮ ಇಡೀ ಕನ್ನಡ ನಾಡಿಗೇ ಗೊತ್ತಿದ್ದಂಥ ರಾಜ್ಯದ ಹಂಗಾಮಿ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದಂಥ ಶ್ರೀ ನಿಟ್ಟೂರು ಶ್ರೀನಿವಾಸರಾಯರು ನೂರು ವರುಷಕ್ಕೆ ಕಾಲಿಟ್ಟಿದ್ದು ನಮ್ಮೆಲ್ಲರಿಗೂ ಬಹಳ ಸಂತೋಷ ತರತಕ್ಕಂಥದ್ದೇ ಆಗಿತ್ತು. ಬಹಳ ಅತ್ಯಂತ ಆಶ್ಚರ್ಯಕರವಾದ ವಿಚಾರವನ್ನು ಸದನದಲ್ಲಿ ನಾನು ಹೇಳುವುದೇನೆಂದರೆ ಮಾನ್ಯ ಈಶ್ವರಪ್ಪನವರು ಅಧ್ಯಕ್ಷರಾಗಿರುವ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ಅಂಡಮಾನ್ ನಿಕೋಬಾರ್‌ಗೆ ಹಾಕಿಕೊಂಡಿತ್ತು. ಈ ಸುನಾಮಿ ದುರಂತ ನಡೆಯುವ ಮೂರು ದಿವಸ ಹಿಂದಿನಿಂದ ನಾವು ಪ್ರವಾಸ ಕಾರ್ಯಕ್ರಮದ ಪ್ರಕಾರ ಹೊರಡಬೇಕಿತ್ತು. ನಾವೇನಾದರೂ ಅಲ್ಲಿಗೆ ಹೋಗಿದ್ದರೆ ನಾವು ಸುನಾಮಿಯಲ್ಲಿ ಸತ್ತು ಇಂದಿನ ಸಂತಾಪ ಸೂಚನೆ ಪಟ್ಟಿಯಲ್ಲಿ ನಮ್ಮ ಹೆಸರುಗಳೂ ಬಂದುಬಿಡುತ್ತಿತ್ತು. ನಾವೆಲ್ಲರೂ ದುರಂತದಲ್ಲಿ ಸಾವನ್ನಪ್ಪುತ್ತಿದ್ದೆವು. ನಾವ್ಯಾರೂ ಇಂದು ಇರುತ್ತಿರಲಿಲ್ಲ. ಪೂರ್ವಜನ್ಮದ ಪುಣ್ಯವೇನೋ, ಇನ್ನೂ ಅಷ್ಟು ದಿವಸ ಇಲ್ಲಿರಬೇಕು ಎಂದಿದ್ದರಿಂದ ನಾವು ಅಧ್ಯಯನ ಪ್ರವಾಸಕ್ಕೆ ಹೋಗಲಿಲ್ಲವೇನೋ. ಮೂರು ದಿವಸ ಹಿಂದೆ ನಾವು ಪ್ರವಾಸ ಕೈಗೊಂಡು ಅಂಡಮಾನ್‌ನಲ್ಲಿ ದುರಂತವಾದ ದಿನವೇ ನಾವು ಪ್ರವಾಸ ದಿವಸ ಹಿಂದೆ ನಾವು ಪ್ರವಾಸ ಕೈಗೊಂಡು ಅಂಡಮಾನ್‌ನಲ್ಲಿ ದುರಂತವಾದ ದಿನವೇ ನಾವು ಪ್ರವಾಸ ಪಟ್ಟಿಯ ಪ್ರಕಾರ ಅಲ್ಲಿರಬೇಕಾಗಿತ್ತು. ನಾವುಗಳು ಯಾರ್‍ಯಾರು ಎಲ್ಲೆಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದೆವೋ ಏನೋ. ಇಂದು ನಾವು ಸಂತಾಪ ಸೂಚಿಸುವುದಿರಲಿ, ಇಂದು ನಮಗೇ ಸಂತಾಪ ಸೂಚಿಸಬೇಕಾಗಿತ್ತು. ಈ ವಿಚಾರವನ್ನು ನಾವು ಯಾರಿಗೂ ಹೇಳಲಿಲ್ಲ. ಏಕೆಂದರೆ ನಾವು ಹೇಳಿದರೂ ಪತ್ರಕರ್ತರು ಪ್ರಚಾರ ಕೊಡುವುದಿಲ್ಲ. ಹೀಗಿರುವಾಗ ಸುಮ್ಮನೆ ನಾವು ಹೇಳಿ ಹೇಳಿ ಕಂಠಶೋಷಣೆ ಮಾಡಿಕೊಳ್ಳುವುದು ಬೇಡ ಎಂದು ಹೇಳಿ ನಾವು ಯಾರಿಗೂ ಹೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳೆ ನಾನು ಹೇಳುವುದನ್ನು ಕೇಳಿ. ಒಂದು ವೇಳೆ ನಾವು ಪ್ರವಾಸಕ್ಕೆ ಹೊಗಿದ್ದರೆ ಸುನಾಮಿ ದುರಂತದಲ್ಲಿ ಎಂಥೆಂಥವರನ್ನು ಕಳೆದುಕೊಂಡು ಬಿಡುತ್ತಿದ್ದಿರಿ ಗೊತ್ತೇ. ಈ ಸದನದಲ್ಲಿರುವ ಮಾನ್ಯ ಜಯಕುಮಾರ್‌ರವರು, ಈಶ್ವರಪ್ಪನವರು, ಸಿ.ಎಂ. ಉದಾಸಿ, ಮಾಧುಸ್ವಾಮಿ, ಇನ್ನು ಆ ಕಡೆಯಲ್ಲಿರುವ ನಾಮೋಶಿಯವರು, ಹೀಗೆ ಸ್ವಲ್ಪ ಹೆಚ್ಚು ಕಡಿಮೆ ಇಪ್ಪತ್ತು ಜನರು ಸಂಪೂರ್ಣವಾಗಿ ಸುನಾಮಿ ದುರಂತದಲ್ಲಿ ಹೊರಟುಹೋಗುತ್ತಿದ್ದರು. ಅದೇನು ಪೂರ್ವ ಜನ್ಮದ ಪುಣ್ಯವೋ ಏನೋ ನಾವು ಪ್ರವಾಸಕ್ಕೆ ಹೋಗಲಿಲ್ಲ. ಇದನ್ನು ನಾನು ಬೆನ್ನಿಹಿನ್‌ನ ಆಶೀರ್ವಾದ ಎಂದೂ ಹೇಳುವುದಕ್ಕೆ ಹೋಗುವುದಿಲ್ಲ ಅಥವಾ ಯಡಿಯೂರಪ್ಪನವರ ಹಿಂದೂ ಧರ್ಮದ ಆಶೀರ್ವಾದ ಎಂದೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾವುದೋ ಒಂದು ಶಕ್ತಿ ನಮ್ಮನ್ನು ಕಾಪಾಡಿದೆ. ಆ ಶಕ್ತಿ ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಸತ್ತಂಥ ನಮಗೆಲ್ಲರಿಗೂ ಸಂತಾಪ ಎಂದು ಹೇಳಿ ಮಾನ್ಯ ಅಧ್ಯಕ್ಷರು ಸದನವನ್ನು

ಮುಂದೂಡುತ್ತಿದ್ದರು, ಅಮೇಲೆ ನಮ್ಮ ಕುಟುಂಬದವರಿಗೆ ಏನು ಕೊಡುತ್ತಿದ್ದಿರೋ ಏನೋ ನಮಗಂತೂ ಗೊತ್ತಾಗುತ್ತಿರಲಿಲ್ಲ ಬಿಡಿ. ಆದರೆ ಇಂದು ಯಾವುದೋ ಒಂದು ಶಕ್ತಿ ನಮ್ಮನ್ನು ಉಳಿಸಿದೆ ಹಾಗೂ ಮತ್ತೆ ಬಹಳ ದಿವಸಗಳ ಕಾಲ ಉಳಿಯುವುದಕ್ಕೆ ನಮಗೆ ಅವಕಾಶ ಕಲ್ಪಿಸಿದೆ ಎಂದು ಹೇಳುತ್ತಾ ಈಗಾಗಲೇ ಮಾನ್ಯ ಅಧ್ಯಕ್ಷರು ಮಂಡಿಸಿರುವ ಸಂತಾಪ ಸೂಚನೆಯ ಪಟ್ಟಿಯಲ್ಲಿರುವ ಎಲ್ಲ ಮಹನೀಯರುಗಳ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :**– ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನೆಗೆ ನಾನು ಅನುಮೋದಿಸುತ್ತೇನೆ. ಮಾನ್ಯ ಪಿ.ವಿ. ನರಸಿಂಹರಾವ್‌ರವರು 1991ರಲ್ಲಿ ಪ್ರಧಾನಮಂತ್ರಿಗಳಾದಾಗ ದೇಶದ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎಂದರೆ ಹಿಂದೆ ಆಡಳಿತ ನಡೆಸಿದಂತಹ ಸರ್ಕಾರಗಳು ದೇಶದ ಬಂಗಾರವನ್ನು ಬೇರೆ ದೇಶದಲ್ಲಿ ಅಡ ಇಟ್ಟಿದ್ದರು ಅಂಥ ಪರಿಸ್ಥಿತಿಯಲ್ಲಿ ಮಾನ್ಯ ಪಿ.ವಿ. ನರಸಿಂಹರಾವ್‌ರವರು ಮತ್ತು ಈಗ ಪ್ರಧಾನ ಮಂತ್ರಿಗಳಾಗಿರುವ ಡಾ॥ ಮನಮೋಹನ್‌ಸಿಂಗ್‌ರವರು ಅಧಿಕಾರ ವಹಿಸಿ ಕೊಂಡಮೇಲೆ ದೇಶದ ಆರ್ಥಿಕ ಸ್ಥಿತಿಯೇ ಬದಲಾಯಿತು. ಮಾನ್ಯ ಪಿ.ವಿ. ನರಸಿಂಹರಾವ್‌ರವರು ಒಬ್ಬ ಹರಿಕಾರರಾಗಿದ್ದರು. ಆರ್ಥಿಕ ಸ್ಥಿತಿ ಬಗ್ಗೆ ಹೆಚ್ಚಿನ ಚಿಂತನೆಯನ್ನು ಅವರು ಮಾಡಿದ್ದರು. ನಮ್ಮ ದೇಶಕ್ಕಿಂತ ಮುಂಚೆಯೇ ಅಂದರೆ 1980ರಲ್ಲಿಯೇ ಚೈನಾ ದೇಶದಲ್ಲಿ ಲಿಬರಲೈಸೇಶನ್ ಪಾಲಿಸಿ ಬಂದಿತ್ತು. ಅದು ಒಂದು ಕಮ್ಯುನಿಸ್ಟ್ ದೇಶವಾದರೂ ಕೂಡ ಮತ್ತು ಲಿಬರಲೈಸೇಶನ್ ಪಾಲಿಸಿ 1980ರಲ್ಲಿಯೇ ಜಾರಿಗೆ ತಂದಿದ್ದರೂ ಕೂಡ ನಮ್ಮ ದೇಶದಲ್ಲಿ 1991 ರವರೆಗೂ ಕೂಡ ಅಂದರೆ ಮಾನ್ಯ ಪಿ.ವಿ. ನರಸಿಂಹರಾವ್‌ರವರು ಪ್ರಧಾನ ಮಂತ್ರಿಗಳಾಗುವವರೆಗೂ ಹಿಂದೆ ಇದ್ದ ಸರ್ಕಾರಗಳು ಲಿಬರಲೈಸೇಶನ್ ಪಾಲಿಸಿ ಜಾರಿಗೆ ತರದೇ ಇದ್ದುದ್ದರಿಂದ ಅಂದು ದೇಶದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಎನ್ನುವ ಮಾತನ್ನು ಹೇಳುತ್ತಾ, ಇವತ್ತು ಮಾನ್ಯ ಸದಸ್ಯರುಗಳು ಅವರ ವಿಷಯವನ್ನು ಬಹಳವಾಗಿ ಹೇಳಿದ್ದಾರೆ. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ, ಅವರ ಜೊತೆಯಲ್ಲಿ ನನ್ನನ್ನು ಅವರ ಹತ್ತಿರ ಕರೆದುಕೊಂಡು ಹೋದರು. ನಾನು ತೆಲುಗಿನಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಅವರು ಬಹಳ ಚೆನ್ನಾಗಿ ಮಾತನಾಡಿದರು ಎಂದು ನನಗೆ ಅನಿಸಿತು. ಆವೊತ್ತು ಇನ್ನು ಐದು ವರ್ಷ ಅವರು ಪ್ರಧಾನಿಗಳಾಗಿದ್ದರೆ ಈ ದೇಶದ ಪರಿಸ್ಥಿತಿ ಇನ್ನಷ್ಟು ಆರ್ಥಿಕವಾಗಿ ವೃದ್ಧಿ ಆಗುತ್ತಿತ್ತು, ಮಾನ್ಯ ಮನಮೋಹನ ಸಿಂಗ್ ಮತ್ತು ಪ್ರಧಾನಿಗಳ ಒಡನಾಡ ಬಹಳ ಚೆನ್ನಾಗಿ ಇತ್ತು ಎನ್ನುವಂತಹ ವಿಚಾರ ನನ್ನ ಮನಸ್ಸಿನಲ್ಲಿ ಬಂದಿದ್ದನ್ನು ಇಲ್ಲಿ ಹೇಳುತ್ತಾ, ಅವರಂತಹ ಒಬ್ಬ ಧೀಮಂತ ನಾಯಕನನ್ನು ಈ ದೇಶ ಕಳೆದುಕೊಂಡಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ಶ್ರೀಮತಿ ಸುಬ್ಬುಲಕ್ಷ್ಮಿ ಮತ್ತು ನಿಟ್ಟೂರು ಶ್ರೀನಿವಾಸರಾವ್‌ರವರು, ಇವರು ಶತಾಯುಷಿಗಳು. ಯಾವುದೇ ಚಾನಲ್ ಹಾಕಿದರೂ ಕೂಡ ಎಲ್ಲಾ ಫಂಕ್ಷನ್‌ಗಳಲ್ಲಿ ಕೂಡ ಅವರ ನೂರನೆ ವಯಸ್ಸಿನಲ್ಲಿ ಪಾಲ್ಗೊಂಡು ಅವರು ತಮ್ಮ ಚಿಂತನೆಯನ್ನು ಹರಿಕಾರರಾಗಿ ಕೊಡುತ್ತಿದ್ದುದ್ದನ್ನು ನೋಡುತ್ತಿದ್ದೆವು. ಇವತ್ತು ಅವರನ್ನು ಕುಡ ಕಳೆದುಕೊಂಡಿದ್ದೇವೆ. ಇನ್ನು ಶ್ರೀ ಕೋಲೂರು ಅವರು ತಮ್ಮ ಚಿಂತನೆಯನ್ನು ಹರಿಕಾರರಾಗಿ ಕೊಡುತ್ತಿದ್ದುದ್ದನ್ನು ನೋಡುತ್ತಿದ್ದೆವು. ಇವತ್ತು ಅವರನ್ನು ಕೂಡ ಕಳೆದುಕೊಂಡಿದ್ದೇವೆ. ಇನ್ನು ಶ್ರೀ ಕೋಲೂರು ಮಲ್ಲಪ್ಪ ಅವರಂತಹ ಗಾಂಧಿವಾದಿ, ಮತ್ತು ಡಾ॥ ರಾಜಾರಾಮಣ್ಣ, ಅವರನ್ನು ಇರಾಕ್‌ನಲ್ಲಿ ಸದ್ದಾಂ ಹುಸೇನ್ ಕರೆದುಕೊಂಡು ಹೋಗಿ ಬಾಂಬ್‌ಗಳನ್ನು ತಯಾರು ಮಾಡಿಸಬೇಕೆನ್ನುವ ಪರಿಸ್ಥಿತಿಯಲ್ಲಿ, ಅಲ್ಲಿಂದ

ತಪ್ಪಿಸಿಕೊಂಡು ದೇಶಕ್ಕೆ ಬಂದಂತಹ ಮಹಾವಿಜ್ಞಾನಿ ನಾವು ಇವರನ್ನು ಕಳೆದುಕೊಂಡಿದ್ದೇವೆ. ಅವರಿಗೆ ಸಂತಾಪವನ್ನು ಸೂಚಿಸುತ್ತಾ, ಶ್ರೀ ಡಿ.ಎ. ಚಿಣ್ಣಪ್ಪನವರು, ಶ್ರೀ ಸಾಗರನಹಳ್ಳಿ ರೇವಣ್ಣ ಇವರು ನನ್ನ ಮತ್ತು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅವರ ಜೊತೆಯಲ್ಲಿ ಸಹಕಾರ ಮಾರಾಟ ಮಹಾಮಂಡಲದ ಸದಸ್ಯರಾಗಿ ಕೆಲಸ ಮಾಡಿದವರು. ಉಪಾಧ್ಯಕ್ಷರಾಗಿ ಕೆಲಸ ಮಾಡಿದವರು. ಅವರು ಸಾಯುವುದಕ್ಕಿಂತ 15 ದಿವಸದ ಮುಂಚಿತವಾಗಿ ನನ್ನ ಹತ್ತಿರ ಬಂದಿದ್ದರು. ಅವರು, ನಮಗೆ ವೀಳೆಯದೆಲೆಗೆ ಬೆಂಬಲ ಬೆಲೆ ಕೊಡಿಸಬೇಕು, ಅದರ ಬೆಲೆ ದಿನೇದಿನೇ ಕುಸಿಯುತ್ತಿದೆ. ವೀಳೆಯದೆಲೆಯನ್ನು ಬೆಳೆಯುವಂತಹ ರೈತರಾಗಿರುವುದರಿಂದ ನೀವೇನಾದರೂ ಮಾಡಬೇಕೆಂದು ಹೇಳಿದ್ದರು. ಅವರು ಅಷ್ಟು ಗಾಂಧಿವಾದಿಗಳು. ಯಾವುದನ್ನೇ ಆಗಲಿ ನೇರವಾಗಿ ನುಡಿಯುವವರು, ಅಂತಹವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತಾ, ಶ್ರೀ ಆರ್.ಡಿ. ಕಿತ್ತೂರ್ ಹಾಗೂ ಶ್ರೀಮತಿ ಅನ್ನಪೂರ್ಣಮ್ಮನವರು, ಶ್ರೀ ಜೆ.ಎಸ್. ಅಮ್ಮಣ್ಣವರ್ ಮತ್ತು ಶ್ರೀ ಎಸ್.ಆರ್. ಲಕ್ಷ್ಮಯ್ಯ ಮಾನ್ಯ ಅಧ್ಯಕ್ಷರೆ, ಇವರ ಜೊತೆಯಲ್ಲಿ ಕೂಡ ನಾನು ಒಂದು ಬಾರಿ ಶಾಸಕನಾಗಿ ಕೆಲಸ ಮಾಡುವಂತಹ ಅವಕಾಶ ಕೂಡಿ ಬಂದಿತ್ತು. ಅವರು ಇದ್ದರೆ ವಿಧಾನಸಭೆಯಲ್ಲಿ ಇದ್ದಾರೆ ಎನ್ನುವುದು ಗೊತ್ತಾಗುತ್ತಿತ್ತು. ಅವರು ಎದ್ದು ಏನೋ ಮಾತನಾಡಿ, ವಿಧಾನಸಭೆಯಲ್ಲಿ ಅವರು ಇದ್ದಾರೆ ಎನ್ನುವುದು ಗೊತ್ತಾಗುತ್ತಿತ್ತು. ಬಹಳ ಸ್ನೇಹಮಯಿ, ಯಾವುದನ್ನು ಹೇಳಬೇಕಾದರೆ ನೇರವಾಗಿ ಹೇಳುತ್ತಿದ್ದರು, ಅವರೂ ಕೂಡ ಇವತ್ತು ನಮ್ಮಲ್ಲಿ ಇಲ್ಲ. ಅವರ ಸುಪುತ್ರರಾದ ಮಾನ್ಯ ಧರ್ಮೇಗೌಡರು ಈ ಶಾಸನಸಭೆಯಲ್ಲಿ ಸದಸ್ಯರಾಗಿದ್ದಾರೆಂದು ತಿಳಿಸುತ್ತಾ, ಮಾನ್ಯ ದೇಸಾಯಿಯವರು, ಶ್ರೀ ಎ.ಡಿ. ಬಿಳಿಗೌಡರು, ಶ್ರೀ ಕೆ. ನಾರಾಯಣಪ್ಪನವರು, ಶ್ರೀ ಗಂಗಾಭೋವಿಯವರು, ಶ್ರೀ ಜಿ. ರಾಮದಾಸ್, ಶ್ರಿ ಆರ್. ಕೆಂಚಪ್ಪನವರು, ಶ್ರೀ ಶಂಕರ ಮೊಕಾಶಿ ಪುಣೇಕರ ಇವರೆಲ್ಲರೂ ಕೂಡ ತೀರಿಕೊಂಡಿದ್ದಾರೆ. ಇವರೆಲ್ಲರಿಗೂ ಸಂತಾಪವನ್ನು ಸೂಚಿಸುತ್ತಾ, ಸುನಾಮಿ ದುರಂತ ಇದೊಂದು ಘೋರ ದುರಂತ. ನಾನು ಸುನಾಮಿ ಆದಮೇಲೆ ಆಸ್ಟ್ರೇಲಿಯಾ ದೇಶಕ್ಕೆ ಹೋಗಿದ್ದೆ. ಅಲ್ಲಿ ನಾನು ಗೋಲ್ಡನ್ ಬೀಚ್‌ನಲ್ಲಿ ಕಾರಿನಲ್ಲಿ ಹೋಗುತ್ತಿದ್ದಾಗ ನನ್ನ ತಲೆಯಲ್ಲಿ ಸುನಾಮಿ ವಿಚಾರವೇ ಬರುತ್ತಿತ್ತು. ಅಲ್ಲೆಲ್ಲ ಜನರು ಸಮುದ್ರದ ಪಕ್ಕದಲ್ಲೇ ಓಡಾಡುವುದು. ಆ ಸಂದರ್ಭದಲ್ಲಿ ನಾನು ಕಾರಿನ ಡ್ರೈವರ್‌ನನ್ನು ಕೇಳಿದೆ, ನಮ್ಮ ಕಡೆ ಸುನಾಮಿಯಿಂದ ಈ ಪರಿಸ್ಥಿತಿಯಾಗಿದೆಯಲ್ಲಾ, ಆದರೆ ಇಲ್ಲಿ ಈ ರೀತಿಯ ಪರಿಸ್ಥಿತಿ ಇದೆಯಲ್ಲಾ, ಇಲ್ಲಿ ಏನಾದರೂ ಸುನಾಮಿ ಗತಿಯೇನು ಎಂದು ಕೇಳಿದಾಗ, ಅವನು ಅಂತಹ ಪರಿಸ್ಥಿತಿ ಏನಾದರೂ ಬಂದರೆ ಸುಮಾರು ಐದು ಗಂಟೆ ಮುಂಚಿತವಾಗಿ ನಮಗೆ ಎಲ್ಲಾ ಹೇಳುತ್ತಾರೆ, ಹಾಗೂ ಅದರ ಬಗ್ಗೆ ಪ್ರಚಾರವಾಗುತ್ತದೆ, ಹಾಗಾಗಿ ಎಲ್ಲರೂ ಸೇಫರ್ ಸೈಡ್‌ಗೆ ಹೋಗಿ ಉಳಿದುಕೊಳ್ಳುವುದಕ್ಕೆ ಅವಕಾಶವನ್ನು ಈ ದೇಶದಲ್ಲಿ ಕಲ್ಪಿಸಿಕೊಡುತ್ತಾರೆಂದು ಹೇಳಿದಾಗ, ಇವತ್ತು ನಮ್ಮ ಕರ್ನಾಟಕದಲ್ಲಿ ಕೂಡ ಕೋಸ್ಟಲ್ ಏರಿಯಾಗಳು ಏನಿದೆ ಅಲ್ಲಿ ತಂತ್ರಜ್ಞಾನ ಅಳವಡಿಸಿ ಈ ರೀತಿಯಾದಂತಹ ಪರಿಸ್ಥಿತಿ ಬರುವಂತಹ ಸೂಚನೆ ಕಂಡುಬಂದರೆ ಅದನ್ನು ನಮ್ಮ ಜನಕ್ಕೆ ನೇರವಾಗಿ ಹೇಳುವಂತಹ ಪರಿಸ್ಥಿತಿಗೆ ನಾವು ತಲುಪಬೇಕಾಗುತ್ತದೆ. ಈ ಒಂದು ಕೆಲಸವನ್ನು ಮಾಡದೆ ಇದ್ದರೆ ಇದು ನಾವು ಮಾಡಿದಂತಹ ಅಪರಾದ ಎಂದು ಭಾವಿಸುತ್ತೇನೆ. ಈಗಾಗಲೇ ಮುಂದುವರೆದ ದೇಶಗಳಲ್ಲಿ ಇಂತಹ ಯಂತ್ರಗಳನ್ನು ಅಳವಡಿಸಿದ್ದಾರೆ. ಆದರೆ ನಮ್ಮ ದೇಶದಲ್ಲಿ ಇಷ್ಟೊಂದು ಸಮುದ್ರ ಇದ್ದರೂ ಕೂಡ ಇದರ ಬಗ್ಗೆ ಇನ್ನೂ ಚಿಂತನೆ ಮಾಡದೆ ಇರುವುದು ಬಹಳ ದುರದೃಷ್ಟಕರ ಎನ್ನುವಂತಹ ಮಾತನ್ನು ಈ ಸಮಯದಲ್ಲಿ ಹೇಳುತ್ತಾ, ಇವತ್ತು ಇವರೆಲ್ಲರ ಸಂತಾಪ ಸೂಚನಾ ಪ್ರಸ್ತಾಪಕ್ಕೆ ನನ್ನ ಸಹಮತವನ್ನು

ಸೂಚಿಸುತ್ತಾ ದೇವರು ಇವರ ಆತ್ಮಕ್ಕೆ ಒಳ್ಳೆಯದು ಮಾಡಲಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಈ ಸಂತಾಪ ಸೂಚನೆಗೆ ನಾನು ಧ್ವನಿಗೂಡಿಸುತ್ತಾ ಸನ್ಮಾನ್ಯ ಪಿ.ವಿ. ನರಸಿಂಹರಾವ್ ಅವರ ಅಗಲಿಕೆ ಬಗ್ಗೆ ನಮಗೆ ಆಗಿರತಕ್ಕಂಥ ಆಘಾತ ಹಾಗೂ ನೋವನ್ನು ಎಲ್ಲರೂ ಹಂಚಿಕೊಂಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ನರಸಿಂಹರಾವ್‌ರವರ ವ್ಯಕ್ತಿತ್ವವನ್ನು ಹಾಗೂ ಅವರ ಹಿರಿತನವನ್ನು ಮನಸಾರೆ ಕೊಂಡಾಡಿದ್ದಾರೆ. ರಾಷ್ಟ್ರದಲ್ಲಿ ಮಾನ್ಯ ನರಸಿಂಹರಾವ್‌ರವರನ್ನು ಕೊಂಡಾಡದೆ ಇರತಕ್ಕಂಥ ರಾಜಕೀಯ ಪಕ್ಷಗಳು ಆಗಲಿ, ವ್ಯಕ್ತಿಗಳಾಗಲಿ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕೆಲವೊಂದು ವಿಚಾರಗಳಲ್ಲಿ ಅವರ ಅಭಿಪ್ರಾಯಕ್ಕೆ ಅವರ ವಿಚಾರಕ್ಕೆ ವ್ಯತಿರಿಕ್ತವಾಗಿ ಭಾವನೆಗಳನ್ನು ಅವರು ವ್ಯಕ್ತಮಾಡಿರಬಹುದು. ಆದರೆ ಅವರು ದೇಶಕ್ಕೆ ಕೊಟ್ಟಿರತಕ್ಕಂಥ ಕಾಣಿಕೆ ಅಪಾರವಾದುದು. ನಮ್ಮ ರಾಷ್ಟ್ರಕ್ಕೆ ಎರಡು ಅತ್ಯವಶ್ಯಕ ಇದ್ದು ಒಂದು ಅಧಿಕಾರ ವಿಕೇಂದ್ರೀಕರಣ, ಇನ್ನೊಂದು ಆರ್ಥಿಕ ಉದಾರೀಕರಣ, ಈ ಎರಡು ಕ್ಷೇತ್ರದಲ್ಲಿ ಅವರು ಅಪಾರವಾಗಿರತಕ್ಕಂಥ ಕೆಲಸವನ್ನು ಮಾಡುವುದರ ಮೂಲಕ ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಢಗೊಳಿಸುವುದು, ವಿಕೇಂದ್ರೀಕರಣಕ್ಕೆ ಸೂಕ್ತ ಚಾಲನೆಯನ್ನು ನೀಡಿರತಕ್ಕಂಥಾದ್ದು ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಉದಾರೀಕರಣ, ಜಾಗತೀಕರಣ ವಿಚಾರದಲ್ಲಿ ದಾಪುಗಾಲು ರಾಷ್ಟ್ರ ಹಾಕುವ ಹಾಗೆ ಮಾಡಿದವರು ಮಾನ್ಯ ನರಸಿಂಹರಾವ್. ಅವರನ್ನು ನಾನು ವೈಯಕ್ತಿಕವಾಗಿ ಬಹಳಷ್ಟು ನೆನಪಿಸಿಕೊಳ್ಳುತ್ತೇನೆ. ಈ ಸಾರ್ವಜನಿಕ ಜೀವನದಲ್ಲಿ ಬಹಳ ಚಿಕ್ಕವಯಸ್ಸಿನಲ್ಲಿ ಹೆಚ್ಚಿನ ಸ್ಥಾನಗಳಿಗೆ ಬರುವುದಕ್ಕೆ ಯಾರಾದರೂ ಕಾರಣ ಆಗಿದ್ದರೆ ನರಸಿಂಹರಾವ್‌ರವರು. ಯುವಕನನ್ನು ಹುಡುಕಿ ವಿರೋಧ ಪಕ್ಷದ ನಾಯಕನನ್ನು ಮಾಡಬೇಕೆಂದು ಹೇಳಿ ನಮ್ಮ ಪಕ್ಷದ ವ್ಯವಸ್ಥೆಯೊಳಗೆ ಆ ದಿವಸ ಆಶೀರ್ವಾದ ಮಾಡಿರತಕ್ಕಂಥ ಒಬ್ಬ ಧೀಮಂತ ನಾಯಕರು. ಅವರನ್ನು ರಾಷ್ಟ್ರವೇ ನೆನಪಿಸಿಕೊಳ್ಳುತ್ತದೆ. ಅವರನ್ನು ಸದಾಕಾಲ ಸ್ಮರಿಸಿಕೊಳ್ಳುತ್ತೇವೆ. ರಾಷ್ಟ್ರದಲ್ಲಿ ಅಷ್ಟೇ ಅಲ್ಲ, ವಿಶ್ವದಲ್ಲೇ ಅತ್ಯಂತ ದೊಡ್ಡ ಶ್ರೇಷ್ಠ ಮುತ್ಸದ್ಧಿ ಎನ್ನುವ ಹೆಸರನ್ನು ಮಾನ್ಯ ನರಸಿಂಹರಾವ್‌ರವರು ಮಾಡಿಕೊಂಡಿದ್ದಾರೆ ಎಂದು ಹೇಳಿದರೆ ಅದು ಸೂಕ್ತವೆನಿಸುತ್ತದೆ. ಅಂತಹ ಧೀಮಂತ ವ್ಯಕ್ತಿತ್ವಕ್ಕೆ ನಾನು ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರು ಬಹುಶಃ ಇವರ ಹಾಡು ಹಾಗೂ ಧ್ವನಿಯನ್ನು ಕೇಳದವರೆ ಯಾರೂ ಇಲ್ಲ. ಅವರು ನಿಜವಾಗಿ 'ಭಾರತ ರತ್ನ' ಇಂತಹ ಶ್ರೇಷ್ಠ ಸಂಗೀತಗಾರ್ತಿಯನ್ನು ಕಳೆದುಕೊಂಡ ಕಲಾಕ್ಷೇತ್ರ ಬಡವಾಗಿದೆ. ಇನ್ನು ನಿಟ್ಟೂರು ಶ್ರೀನಿವಾಸರಾವ್ ಅವರನ್ನು ನೆನಪಿಸಿಕೊಂಡಾಗಲೆಲ್ಲಾ ನಮ್ಮ ಪೀಳಿಗೆಯವರಿಗೆಲ್ಲಾ ಶಿಸ್ತು ನೆನಪಾಗುತ್ತದೆ. ಅವರು ಆ ವಯಸ್ಸಿನಲ್ಲಿ ದೈಹಿಕ ಸ್ಥಿತಿಯಲ್ಲಿ ಕೂಡ ಸಮಯಪ್ರಜ್ಞೆ ಇಟ್ಟುಕೊಂಡು ಸರಿಯಾದ ಸಮಯಕ್ಕೆ ಬರುವುದು, ಎಲ್ಲರ ಜೊತೆ ಸೌಜನ್ಯಪೂರ್ಣವಾದ ಮಾತುಗಳನ್ನು ಹೇಳುವುದು, ಮಾರ್ಗದರ್ಶನ ಮಾಡುವುದು ನೋಡಿದಾಗ ನಿಜವಾಗಿ ಆ ಒಬ್ಬ ದೊಡ್ಡ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ಕರ್ನಾಟಕಕ್ಕೆ ಒಬ್ಬ ಶ್ರೇಷ್ಠ ಹಿರಿಯರಾಗಿದ್ದರು, ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಕೋಲೂರು ಮಲ್ಲಪ್ಪನವರು ನಮ್ಮ ರಾಷ್ಟ್ರದಲ್ಲಿ ಹಿಂದುಳಿದವರಿಗೆ ವಿಶೇಷ ಧ್ವನಿಯನ್ನು ಕೊಟ್ಟಂತಹವರು ಶ್ರೀಮತಿ ಇಂದಿರಾಗಾಂಧಿಯವರಿಗೆ ಒಂದು ಕಾಲದಲ್ಲಿ ಬಲಗೈ ಬಂಟರಾಗಿ ಕೆಲಸ ಮಾಡಿದ್ದರು. ಧ್ವನಿಯಿಲ್ಲದೆ ಇದ್ದಂತಹ ಹಲವಾರು ಸಮಾಜದ ವರ್ಗದಿಂದ ಬಂದಂತಹ ವ್ಯಕ್ತಿಗಳು ರಾಷ್ಟ್ರಮಟ್ಟದ

ನಾಯಕರಾಗುವುದಕ್ಕೆ ಸಾಧ್ಯವಾಯಿತು, ಒಬ್ಬ ಶ್ರೇಷ್ಠನಾಯಕರನ್ನು ಕಳೆದುಕೊಂಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಆಧ್ಯಾತ್ಮಿಕತೆ ಬಗ್ಗೆ ಮಾತನಾಡುತ್ತಿದ್ದರು. ಕುಷ್ಠ ರೋಗಿಗಳ ಬಗ್ಗೆ ವಿಶೇಷವಾದ ಸೇವೆ, ಅವರಿಗೆ ವಿಶೇಷವಾಗಿರತಕ್ಕಂಥ ನಂಬಿಕೆ ಮತ್ತು ಅದರ ಬಗ್ಗೆ ಆಸಕ್ತಿ. ಯಾರು ಕುಷ್ಠ ರೋಗಿಗಳನ್ನು ಸೇವೆ ಮಾಡುವುದಕ್ಕೆ ಮುಂದೆ ಬರುತ್ತಾರೆ ಅವರನ್ನು ಕರೆದು ಪ್ರೋತ್ಸಾಹ ಮಾಡುತ್ತಿದ್ದರು. ಹಲವಾರು ಸಂಘಸಂಸ್ಥೆಗಳನ್ನು ಕಟ್ಟಿದ್ದರು. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಕೋಲೂರು ಮಲ್ಲಪ್ಪನವರು ಕಟ್ಟಿರತಕ್ಕಂಥ ಸಂಸ್ಥೆಗಳೇನಿವೆ ಅವುಗಳು ಹೆಚ್ಚು ಬೆಳೆಯುವ ಹಾಗೆ ಹಾಗೂ ಉಳಿಯುವ ಹಾಗೆ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಡಾ॥ ರಾಜಾರಾಮಣ್ಣನವರು ನಮ್ಮ ಕರ್ನಾಟಕ ರಾಜ್ಯದ ಪುತ್ರರಾಗಿದ್ದರು. ಇವರು ನಮ್ಮ ಕರ್ನಾಟಕದವರು ಎಂದು ಹೇಳುವಾಗ, ನಮಗೆ ಮುಜುಗರವೆನಿಸುತ್ತದೆ ಏಕೆಂದರೆ ಅವರದು ದೊಡ್ಡ ವ್ಯಕ್ತಿತ್ವ ಇವತ್ತು ಇಡೀ ರಾಷ್ಟ್ರವೇ ಇವರ ಬಗ್ಗೆ ಅಭಿಮಾನ ಪಡತಕ್ಕಂಥ ಸಂದರ್ಭದಲ್ಲಿ, ಅವರು ನಮ್ಮವರು ಎಂದು ಹೇಳುವ ಸಂದರ್ಭ ಆಗಿದೆ. ಇವರ ಅಗಲಿಕೆ ನಿಜವಾಗಿಯೂ ನಮಗೆಲ್ಲರಿಗೂ ದುಃಖವನ್ನು ತಂದಿದೆ. ಅದೇ ರೀತಿ ಶ್ರೀ ಡಿ.ಎ. ಚಿಣ್ಣಪ್ಪ, ಶ್ರೀ ಸಾಗರನಹಳ್ಳಿ ರೇವಣ್ಣ, ಶ್ರೀ ಆರ್.ಡಿ. ಕಿತ್ತೂರ್, ಶ್ರೀಮತಿ ಅನ್ನಪೂರ್ಣಮ್ಮ, ಶ್ರೀ ಜೆ.ಎಸ್. ಅಮ್ಮಣ್ಣವರ್, ಶ್ರೀ ಎಸ್.ಆರ್. ಲಕ್ಷ್ಮಯ್ಯ, ಶ್ರೀ ಎ.ಎ. ದೇಸಾಯಿ, ಶ್ರೀ ಎ.ಡಿ. ಬಿಳಿಗೌಡ, ಶ್ರೀ ಗಂಗಾಭೋವಿ, ಶ್ರೀ ಕೆ. ನಾರಾಯಣಪ್ಪ, ಶ್ರೀ ಜಿ. ರಾಮದಾಸ್, ಶ್ರೀ ಆರ್. ಕೆಂಚಪ್ಪ, ಇವರೆಲ್ಲರೂ ನಮ್ಮ ರಾಷ್ಟ್ರಕ್ಕೆ, ನಮ್ಮ ರಾಜ್ಯಕ್ಕೆ ವಿಶೇಷವಾಗಿ ಸೇವೆಯನ್ನು ಸಲ್ಲಿಸಿದವರಾಗಿದ್ದಾರೆ. ಅವರಿಗೆಲ್ಲಾ ನನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಇನ್ನು ಶ್ರೀ ಶಂಕರ ಮೊಕಾಶಿ ಮಣೀಕರರವರು ಧಾರವಾಡ ಜಿಲ್ಲೆಯ ಹೆಮ್ಮೆಯ ಪುತ್ರರು. ನಮ್ಮ ಕರ್ನಾಟಕ ರಾಜ್ಯದ ಶ್ರೇಷ್ಠ ಸಾಹಿತಿಗಳಾಗಿದ್ದವರು, ರಾಷ್ಟ್ರಮಟ್ಟಕ್ಕೆ ಬೆಳೆದಂಥವರು. ಇವರು "ಗಂಗಮ್ಮ-ಗಂಗಮಾಯಿ" ಪುಸ್ತಕ, ನಮ್ಮ ರಾಷ್ಟ್ರದ ಎಲ್ಲಾ ಅಧಿಕೃತ ಭಾಷೆಗಳಲ್ಲಿ ಭಾಷಾಂತರಗೊಂಡಿದೆ. ಭಾಷಾಂತರಗೊಂಡ ಈ ಪುಸ್ತಕ ಮೊದಲನೆಯ ಮುದ್ರಣ, ಎರಡನೆಯ ಮುದ್ರಣ, ಮೂರನೆಯ ಮುದ್ರಣಕ್ಕೆ ಕಾಲಿಡುವಷ್ಟು ಜನರಲ್ಲಿ ಈ ಪುಸ್ತಕ ಜನಪ್ರಿಯತೆಯನ್ನು ಗಳಿಸಿಕೊಂಡಿದೆ, ಎಂದರೆ ಇದು ಎಷ್ಟು ಉತ್ತಮವಾದ ಸಾಹಿತ್ಯವೆಂಬುದನ್ನು ನಾವು ಊಹಿಸಬಹುದು. ಇಂತಹ ಒಬ್ಬ ಶ್ರೇಷ್ಠ ಸಾಹಿತಿಯನ್ನು ನಾವು ಕಳೆದುಕೊಂಡಿದ್ದೇವೆ. ಇವರಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ. ಇನ್ನು ಸುನಾಮಿ ದುರಂತದ ಬಗ್ಗೆ ಸಾಕಷ್ಟು ಮಾತುಗಳು ಆಯಿತು. ನಮಗೆ ಈ ಸುನಾಮಿ ದುರಂತದ ಬಗ್ಗೆ ಕೇಳಿದಾಗಲೆಲ್ಲಾ, ಇಲ್ಲಿ ಆ ಸಂದರ್ಭದಲ್ಲಿ ಮಕ್ಕಳು ಸಮುದ್ರದಲ್ಲಿ ಕೊಚ್ಚಿಕೊಂಡು ಹೋದರು. ಅದರ ಬಗ್ಗೆ ಹೆಚ್ಚು ಚಿಂತೆ ಮತ್ತು ನೋವು ಆಗಿದೆ. ಈ ಸುನಾಮಿ ದುರಂತದ ಬಗ್ಗೆ ಮಾನ್ಯ ಶ್ರೀನಿವಾಸಗೌಡರು ಹಲವಾರು ವಿಚಾರಗಳನ್ನು ಹೇಳಿದರು. ಅದೇ ರೀತಿಯಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಈ ಸುನಾಮಿ ದುರಂತದ ಬಗ್ಗೆ ಈ ನಿಸರ್ಗಕ್ಕೆ ನಾವು ಮಾಡಿರುವ ದ್ರೋಹಕ್ಕೆ ದೇವರು ಈ ರೀತಿಯಾಗಿ ಶಾಪವನ್ನು ಕೊಟ್ಟಿದ್ದಾನೆಂಬ ಮಾತನ್ನು ಹೇಳಿದರು. ನನಗೆ ಈ ಸುನಾಮಿ ದುರಂತದ ಬಗ್ಗೆ ಮಾತನಾಡುವಾಗ, ಕೇಳುವಾಗ, ಇಲ್ಲಿ ಯಾರು ಯಾರಿಗೆ ಮಾಡಿದ್ದಾರೆಂಬ ಬಗ್ಗೆ ಯಾರ ಮೇಲೂ ಸಿಟ್ಟು ಬರುವುದಿಲ್ಲ. ಆದರೆ ದೇವರು ಇಷ್ಟೊಂದು ಕ್ರೌರ್ಯವನ್ನು ತೋರಿಸುತ್ತಾನೆ. God can become so cruel, ಎನ್ನುವುದನ್ನು establish ಮಾಡಿದನಲ್ಲಾ, ಎನ್ನುವಷ್ಟರಮಟ್ಟಿಗೆ ದೇವರ ಮೇಲೆ ಸಿಟ್ಟು ಬರಬೇಕು. ಅಷ್ಟು ಕ್ರೂರವಾದಂತಹ ಘಟನೆ ಇದು ಆಗಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಇಂತಹ ಘಟನೆಗಳು ಆದಾಗ ಜನರು

ಹೇಗೆ ಸ್ಪಂದಿಸುತ್ತಾರೆಂಬುದನ್ನು ಎಲ್ಲರೂ ನೋಡುತ್ತಾ ಇರುತ್ತಾರೆ. ನಮ್ಮ ದೇಶದ ಜನರು ಬಡವರು, ನಾವೆಲ್ಲಾ ಸುನಾಮಿ ದುರಂತದ ಪರಿಹಾರಕ್ಕೆ ಹಣವನ್ನು ಸಂಗ್ರಹಿಸುವ ಸಲುವಾಗಿ ಪೇಟೆಗಳಿಗೆ ಹೋದಂತಹ ಸಂದರ್ಭದಲ್ಲಿ ಬಡವರು, ಸಣ್ಣ ಸಣ್ಣ ವ್ಯಾಪಾರಸ್ಥರು, ಬಾಳೆಹಣ್ಣು ಮಾರುವವರು, ಅದರಲ್ಲೂ ಕೆಲವು ಕಡೆಗಳಲ್ಲಿ ಮಕ್ಕಳು ಸತ್ತಿರುವಂಥಾದ್ದಕ್ಕೆ, ವಿಶೇಷವಾಗಿ ಅಘಾತವಾಗಿರಬಹುದು. ಪರಿಹಾರಕ್ಕೆ ಕಾಣಿಕೆಗಳನ್ನು ಕೊಡುವಂಥಾದ್ದು ಟಿ.ವಿ. ಮುಖಾಂತರ ಇರಬಹುದು, ಪತ್ರಿಕೆಗಳ ಮುಖಾಂತರ ಇರಬಹುದು. ನೋಡಿದಾಗ, ಇಲ್ಲಿ ಅವರು ತೋರಿಸುವಂತಹ ಕಾಳಜಿ, ಕಳಕಳಿ, ನೋಡಿದಾಗ ನಿಜವಾಗಿಯೂ ಸಮಾಧಾನವೆನಿಸುತ್ತಿತ್ತು. ಆದರೆ ಅಮೇರಿಕಾ ದೇಶದ ಅಧ್ಯಕ್ಷರಾದ ಬುಷ್‌ರವರು ಈ ಸುನಾಮಿ ದುರಂತಕ್ಕೆ ಮೊದಲ ಬಾರಿ 15ಮಿಲಿಯನ್ ಡಾಲರ್ ಘೋಷಣೆ ಮಾಡಿದರು. ಈ ಸಂದರ್ಭದಲ್ಲಿ ಬುಷ್‌ರವರನ್ನು ಹೊಗಳುವಂತಹ ಪ್ರತಿಯೊಬ್ಬರೂ ತೆಗಳುವಂತಹ ಕೆಲಸವನ್ನು ಮಾಡಿದರೆಂಬ ಮಾತು ಎಲ್ಲಾ ಕಡೆ, ಜಗತ್ತಿನ ಪತ್ರಿಕೆಗಳಲ್ಲಿ ಬರುವಂತಹ ಕಾರ್ಯವಾಯಿತು. ಅಮೇರಿಕಾದಂತಹ ರಾಷ್ಟ್ರ ಇರಾಕ್‌ನ ಮೇಲೆ ಯುದ್ಧ ಮಾಡಲು, ಪ್ರತಿ ದಿವಸ 70 ಮಿಲಿಯನ್ ಡಾಲರ್‌ಗಳನ್ನು ಖರ್ಚು ಮಾಡುವಂತಹ ಶ್ರೀಮಂತ ಇಂತಹ ದುರಂತಗಳು ಆದಾಗ, ಕೇವಲ 15 ಮಿಲಿಯನ್ ಡಾಲರ್‌ಗಳನ್ನು, ಕೊಟ್ಟು ಆನಂತರ 35 ಮಿಲಿಯನ್ ಡಾಲರುಗಳಿಗೆ ಹೆಚ್ಚಿಸಿದರು. ಆದರೆ ನಮ್ಮ ದೇಶಕ್ಕೆ ಎಷ್ಟು ಹಣ ಬರುತ್ತದೋ ಬರಲಿ ಎಂಬ ಮಾತು ಅಲ್ಲ., ಏಕೆಂದರೆ ನಮ್ಮ ಪ್ರಧಾನಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್‌ರವರು, ಸುನಾಮಿ ದುರಂತಕ್ಕೆ ನಾವು ಯಾವ ಸಹಾಯವನ್ನು ಕೇಳುವುದಿಲ್ಲ. ನಾವು ನಮ್ಮ ದೇಶದಲ್ಲೆ ಸಾಕಷ್ಟು ಸಂಪನ್ಮೂಲಗಳನ್ನು ಮೊಬಲೈಜ್ ಮಾಡುತ್ತೇವೆ. ನಮ್ಮ ದೇಶದ ಜನರು ಕೊಡುತ್ತಾರೆ. ಅದನ್ನೇ ನಾವು ಉಪಯೋಗ ಮಾಡಿಕೊಂಡು ಪರಿಹಾರವನ್ನು ಒದಗಿಸುತ್ತೇವೆ. ಇನ್ನು ಬೇಕಾದರೆ ಬೇರೆ ರಾಷ್ಟ್ರಕ್ಕೂ ಸಹಾಯ ಮಾಡಲು ಸಿದ್ಧರಿದ್ದೇವೆನ್ನುವ ಮಾತನ್ನು ಹೇಳುವ ಮೂಲಕ, ಅವರು ಸಹಾಯವನ್ನು ಹೆಚ್ಚು ಕೊಡುವುದಕ್ಕೆ ಮುಂದೆ ಬಂದರು, ಅಷ್ಟೇ ಅಲ್ಲ. ಅವರು ದೇಶಾಭಿಮಾನವನ್ನು ಕುದುರಿಸುವಂತಹ ಆ ನಿಲುವನ್ನು ತೆಗೆದುಕೊಂಡರೆಂಬ ವಿಚಾರವನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು, ಈ ಸುನಾಮಿ ದುರಂತದಲ್ಲಿ ದುರಂತಕ್ಕೊಳಗಾದಂತಹ ಎಲ್ಲಾ ಕುಟುಂಬಗಳಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವುದರ ಜೊತೆಗೆ ಈ ದುರಂತದಲ್ಲಿ ಸಿಕ್ಕಿಕೊಂಡವರಿಗೆ, ಅವರಿಗೆ ಪರಿಹಾರವನ್ನು ಕೊಡಲು ಮುಂದೆ ಬಂದಿರುವಂತಹ ಜನರು ಇದ್ದಾರೆ. ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಿ, ಯಾರ್‍ಯಾರು ಇಲ್ಲಿ ನಮ್ಮನ್ನು ಅಗಲಿ ಹೊಗಿದ್ದಾರೆ. ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):**– ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಎಲ್ಲಾ ಗೌರವಾನ್ವಿತ ಸದಸ್ಯರುಗಳು, ಸಂತಾಪ ಸೂಚನೆಯನ್ನು ಮಾಡಿದ್ದಾರೆ, ಈ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಬಹುದು. ಅದರಲ್ಲಿ ಶ್ರೀ ಪಿ.ವಿ. ನರಸಿಂಹರಾವ್‌ರವರನ್ನು ಕುರಿತು, ಮಾನ್ಯ ಮುಖ್ಯಮಂತ್ರಿಯವರು ಅತ್ಯಂತ ನಿಕಟವಾಗಿದ್ದಂಥವರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ನಿಜಲಿಂಗಪ್ಪನವರು ಆತ್ಮ ಚರಿತ್ರೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಅದು ಸ್ವಾಮಿ ರಮಾನಂದ ತೀರ್ಥರು, 1956ರಲ್ಲಿ ಕರ್ನಾಟಕ ಏಕೀಕರಣವಾಗುವಂತಹ ಸಂದರ್ಭ ಬಂದಾಗ ಮಾನ್ಯ ವಿರೇಂದ್ರ ಪಾಟೀಲ್‌ರವರನ್ನು ಮಂತ್ರಿಯನ್ನಾಗಿ ಮಾಡಿ, ಎಂದು ಶಿಫಾರಸ್ಸು ಮಾಡುತ್ತಾರೆ. ಆ ಸಂದರ್ಭದಲ್ಲಿ ಸ್ವಾಮಿ ರಮಾನಂದ ತೀರ್ಥರು

ಮೂರು ಜನರ ಬಗ್ಗೆ ಪ್ರಸ್ತಾಪ ಮಾಡಿದರು. ಮೊದಲನೆಯದಾಗಿ ಅಂದಿನ ನಿಜಾಮ ಶಾಹಿಯ ಹೈದರಬಾದ್ ಸರ್ಕಾರದಲ್ಲಿ ಮಹಾರಾಷ್ಟ್ರದ ಮರಾಠಿ ಭಾಷೆಯನ್ನು ಮಾತನಾಡುವಂತಹ ಜನರ ಹಿತಾಸಕ್ತಿಯನ್ನು ನೋಡಿಕೊಳ್ಳುವ ಸಲುವಾಗಿ ಶ್ರೀ ಎಸ್.ಬಿ. ಚವಾಣ್‌ರವರನ್ನು ಕಾರ್ಯದರ್ಶಿಯನ್ನಾಗಿ ನಾನು ಮಾಡಿಕೊಂಡಿದ್ದೆ, ತೆಲುಗು ಮಾತನಾಡುವಂತಹ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಮಾನ್ಯ ಪಿ.ವಿ. ನರಸಿಂಹರಾವ್‌ರವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡಿದ್ದೆ, ಕನ್ನಡ ಭಾಷೆಯನ್ನು ಮಾತನಾಡುವಂತಹ ಭಾಷಿಕರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಮಾನ್ಯ ವೀರೇಂದ್ರ ಪಾಟೀಲ್‌ರವರನ್ನು ಕಾರ್ಯದರ್ಶಿಯನ್ನಾಗಿ ಮಾಡಿಕೊಂಡಿದ್ದೆ. ಇದರಲ್ಲಿ ಈಗಾಗಲೇ ಶ್ರೀ ಎಸ್.ಬಿ. ಚವಾಣ್‌ರವರು ಮತ್ತು ಶ್ರೀ ಪಿ.ವಿ. ನರಸಿಂಹರಾವ್‌ರವರು ಮಂತ್ರಿಗಳಾಗುತ್ತಾರೆ. ಆದುದರಿಂದ ಮಾನ್ಯ ವೀರೇಂದ್ರ ಪಾಟೀಲ್‌ರವರನ್ನು ನಿಮ್ಮ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ತೆಗೆದುಕೊಳ್ಳಬೇಕೆಂದು, ಸ್ವಾಮಿ ರಮಾನಂದ ತೀರ್ಥರು, ಮಾನ್ಯ ನಿಜಲಿಂಗಪ್ಪನವರಿಗೆ ಪತ್ರವನ್ನು ಬರೆದದ್ದರಿಂದ ಮಾನ್ಯ ವೀರೇಂದ್ರ ಪಾಟೀಲ್‌ರವರು ಮಂತ್ರಿಗಳಾಗುತ್ತಾರೆ. ಇಲ್ಲಿ ನಾವು ಯೋಚನೆ ಮಾಡಿದರೆ, ದೂರದೃಷ್ಟಿಯಿಂದ, ಒಬ್ಬ ಹಿರಿಯ ನಾಯಕರ ಕೈ ಕೆಳಗೆ, ಅದು ಸ್ವಾತಂತ್ರ್ಯ ಹೋರಾಟವೇ ಆಗಿರಬಹುದು, ಅಥವಾ ಜನಪರ ಕಾಳಜಿಗಳನ್ನು ಮೈಗೂಡಿಸಿಕೊಳ್ಳುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂಥಾದ್ದು ಆಗಬಹುದು. ಸ್ವಾಮಿ ರಮಾನಂದ ತೀರ್ಥರು, ನಮ್ಮ ದೇಶ ಕಂಡಂತಹ ಅತ್ಯಂತ ಉಗ್ರಹೋರಾಟಗಾರರು, ಮತ್ತು ಆಧ್ಯಾತ್ಮಿಕ ಚಿಂತನಶೀಲರು ಆಗಿದ್ದರು. ಅವರು ಎಂದೂ ಅಧಿಕಾರವನ್ನು ಅನುಭವಿಸಿದಂಥವರು ಅಲ್ಲ. ಆ ಕಾರಣಕ್ಕಾಗಿ ಶ್ರೀ ಪಿ.ವಿ. ನರಸಿಂಹಾರವ್‌ರವರಂಥ ಹಿರಿಯರನ್ನು ಅವರು ಬೆಳೆಸಿದರು. ಇನ್ನು ಅವರು ತಮ್ಮದೇ ಆದಂತಹ ನಿಲುವುಗಳನ್ನು, ಅವರು ಒಬ್ಬ ವಿವಾದಿತ ವ್ಯಕ್ತಿಯಾಗಿದ್ದರೆಂದು ಅನ್ನುವುದಿಲ್ಲ. ಆದರೆ ವಿವಾದಕ್ಕೆ ಒಳಗಾಗಿದ್ದರೆಂಬ ಕಾರಣಕ್ಕಾಗಿ, ಅವರು ಕೊಟ್ಟಿರುವಂತಹ ಕೊಡುಗೆಯನ್ನು ನಾವು ಮರೆಯುವುದಕ್ಕೆ ಆಗುವುದಿಲ್ಲ. ಈಗಾಗಲೇ ಮಾನ್ಯ ಶ್ರೀನಿವಾಸಗೌಡರು ಪ್ರಸ್ತಾಪ ಮಾಡಿದಂತೆ, ಉದಾರೀಕರಣ ಹರಿಕಾರರಾಗಿ, ಈ ವಿಚಾರದಲ್ಲಿ ದೇಶ ಪ್ರಗತಿಯನ್ನು ಪಡೆಯುವುದಕ್ಕೆ, ಮತ್ತು ಅಭಿವೃದ್ಧಿಶೀಲ ರಾಷ್ಟ್ರವಾಗುವುದಕ್ಕೆ ಅವರ ಕೊಡುಗೆ ಅಪಾರವಾದದ್ದು. ಅವರು ಬಹು ಭಾಷಾಪರಿಣಿತರು ಆಗಿದ್ದರು, ಕನ್ನಡ ಭಾಷೆಯನ್ನು ಬಹಳ ಚೆನ್ನಾಗಿ ಗೊತ್ತಿದ್ದಂಥವರೂಕೂಡ ಆಗಿದ್ದರು. ಅದರಲ್ಲೂ ಹೈದರಾಬಾದ್ ಕರ್ನಾಟಕ ಭಾಗದ ಅನೇಕ ಹಿರಿಯ ಮುಖಂಡರ ಜೊತೆಗೆ ಅವರ ಸಂಪರ್ಕ ಇತ್ತು. ಅವರ "ಇನ್ ಸೈಡ್‌ರ್" ಎನ್ನುವ ಪುಸ್ತಕ ಏನು ಇದೆ. ಅದರಲ್ಲಿ ತಮ್ಮ ಮುನ್ನುಡಿಯಲ್ಲಿ ನಾನು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳುತ್ತಾರೆ. ಆದರೆ ಅವರ ಗುಣಕ್ಕೆ ಅನುಗುಣವಾಗಿ ಅಥವಾ ಅವರ ಸ್ವಭಾವವೇ ಹಾಗೆ ಇತ್ತು, ಎಂದು ಅನಿಸುತ್ತದೆ. ಈ ಪುಸ್ತಕದಲ್ಲಿರುವ ವಿಷಯದ ಬಗ್ಗೆ ಅನೇಕ ಜನರು ಕುತೂಹಲಕಾರಿಯಾಗಿದ್ದರು. ಅನೇಕ ವಿಷಯಗಳು ಹೊರಬರುತ್ತದೆಂದು ಅನೇಕರು ತಿಳಿದಿದ್ದರು. ಆದರೆ ಅವರು ಮುಚ್ಚಿಟ್ಟಿದ್ದೇ ಜಾಸ್ತಿಯಾಗಿತ್ತು. ಅವರು ಆ ಪುಸ್ತಕದಲ್ಲಿ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿರಲಿಲ್ಲ. ಆದರೆ ಅವರು ಒಳ್ಳೆಯ ಬರಹಗಾರರು ಆಗಿದ್ದರು, ಮತ್ತು ಸಂಗೀತದ ಬಗ್ಗೆ ಅಪಾರವಾದಂತಹ ಪ್ರೇಮವಿತ್ತು. ಅವರು ಅನೇಕ ಭಾಷೆಗಳನ್ನು ಕಲಿತಂಥವರು ಆಗಿದ್ದರು. ಅವರು ಲಿಂಗ್ವಿಸ್ಟರ್. ಅವರು ಒಬ್ಬ ವ್ಯಾಕರಣಬದ್ಧವಾಗಿ ಸಾಹಿತ್ಯವನ್ನು ಓದಿಕೊಂಡಿರುವಂತಹ ಕಲಿಯುವಿಕೆಯ, ತಿಳುವಳಿಕೆ ಇರುವಂತಹ ಒಬ್ಬ ಪ್ರಧಾನಮಂತ್ರಿಯಾಗಿದ್ದರು, ನಾಯಕರಾಗಿದ್ದರು, ಎಂಬುದು ಬಹಳ

ಮುಖ್ಯವಾದಂಥಾದ್ದು. ಇನ್ನು ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರು, ಇವರ ಬಗ್ಗೆ ಎಲ್ಲರೂ ಕೂಡ ಗುಣಗಾನ ಮಾಡಿದ್ದಾರೆ, ಅವರು ಕರ್ನಾಟಕ ಸಂಗೀತದಲ್ಲಿ, ಅದರಲ್ಲೂ ಪುರಂದರ ದಾಸರ ಕೃತಿಗಳನ್ನು, ಕನ್ನಡದಲ್ಲೇ ಹಾಡಿರುವಂಥಾದ್ದನ್ನು ನಾವು ಕೇಳಿದ್ದೇವೆ, ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ, ಅವರು ಹಾಡಿರುವಂಥವರಲ್ಲಿ ಏಕಮೇವ ಅದ್ವಿತೀಯ ಮಹಿಳೆ ಎಂದು ಹೇಳಬಹುದು. ಶ್ರೀ ರಾಜಗೋಪಾಲಚಾರ್‌ರವರು ಅವರ ಬಗ್ಗೆ ಬರೆದಿರುವಂತಹ ಒಂದು ಕೃತಿ, ಅವರ ಸಂಗೀತದ ಜ್ಞಾನದ ಬಗ್ಗೆ, ಮತ್ತು ಅವರ ರೂಪದ ಬಗ್ಗೆ, ಅವರ ವ್ಯಕ್ತಿತ್ವದ ಬಗ್ಗೆ ಹಿಡಿದಿರುವಂತಹ ಕನ್ನಡಿಯಾಗಿದೆ. ನಾವು ಸೌಂದರ್ಯ ಅನ್ನುವಂಥಾದ್ದನ್ನು ಸ್ನಿಗ್ಧ ಸೌಂದರ್ಯ ಮತ್ತು ಪ್ರಚೋದನಾತ್ಮಕ ಸೌಂದರ್ಯ ಎಂದು ವಿಭಾಗಿಸುವುದಾದರೆ, ಸ್ನಿಗ್ಧ ಸೌಂದರ್ಯದ ಮೂಲಕವಾಗಿ ಒಂದು ಆಧ್ಯಾತ್ಮಕ ಗುಣವನ್ನು, ನೋಡಿದ ತಕ್ಷಣವೇ ಯಾವುದೋ ಒಂದು ಒಳಪಕ್ವವಾಗಿರತಕ್ಕಂಥ ಮನುಷ್ಯರ ಜೊತೆ ಸಂಬಂಧ ಇದೆ ಎನ್ನುವ ರೀತಿಯಲ್ಲಿ ಸುಬ್ಬುಲಕ್ಷ್ಮಿಯವರು ಅತ್ಯಂತ ಸುಂದರಿಯಾಗಿದ್ದರು. ಪ್ರಾಯಶಃ, ಭಾರತ ದೇಶದ ಚಲನಚಿತ್ರ ಪ್ರಪಂಚದಲ್ಲಿ ಹಾಡುವ ರೀತಿಯಲ್ಲಿರತಕ್ಕಂಥ ನಾಯಕ, ನಾಯಕಿಯರನ್ನು ಆರಿಸಿದರೆ ಇಬ್ಬರು ಸಿಗುತ್ತಾರೆ, ಒಬ್ಬರು ಸೈಗಾಲ್‌ರವರು, ಮತ್ತೊಬ್ಬರು ಸುಬ್ಬುಲಕ್ಷ್ಮಿಯವರು. ಅವರ ಕಛೇರಿಗಳಲ್ಲಿ ಕುಳಿತಾಗ, ಅವರ ವಜ್ರದ ಮೂಗುತಿ ಹೊಳೆಯತಕ್ಕಂಥಾದ್ದರ ಜೊತೆಜೊತೆಗೆ ಅವರ ಹಾಡುಗಾರಿಕೆಯನ್ನು ನಾವು ಬಹಳ ಜನ ಆಸ್ವಾದಿಸಿದ್ದೇವೆ. ಅಂಥ ಒಂದು ಆಧ್ಯಾತ್ಮಿಕ ಚಿಂತನೆಯಲ್ಲಿ, ಒಂದು ಹಿಂದುಳಿದ ಜನಾಂಗದಿಂದ ಬಂದು ಅಂಥ ಒಂದು ಮೇರುಸ್ಥಾನವನ್ನು ತಮ್ಮ ಸಂಗೀತದ ಮೂಲಕವಾಗಿ ಪಡೆದು ಈ ದೇಶದಲ್ಲಿ ಅವರು ಅಚ್ಚಳಿಯದಂಥ ಒಂದು ಹೆಜ್ಜೆಯನ್ನು ಇಟ್ಟಿದ್ದಾರೆ. ಅವರು ಮಾನ್ಯ ರಾಮಕೃಷ್ಣ ಹೆಗಡೆಯವರಿಗೂ ಸಹ ಒಂದು ಸಾರ್ಕ್ ಸನ್ನಿವೇಶದ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಿದ್ದರು. ಹಿಂದೂಸ್ಥಾನಿ ಸಂಗೀತಗಾರರಿಗೆ ಒಂದು ಲಕ್ಷ, ಒಂದೂವರೆ ಲಕ್ಷ ರೂಪಾಯಿಗಳ ಸಂಭಾವನೆಯನ್ನು ಕೊಡುತ್ತೀರಿ, ಆದರೆ ಕರ್ನಾಟಕ ಸಂಗೀತಗಾರರಿಗೆ ತಾವು ಐವತ್ತು ಸಾವಿರಕ್ಕಿಂತ ಹೆಚ್ಚಿನ ಸಂಭಾವನೆಯನ್ನು ಕೊಡುತ್ತಿಲ್ಲ, ಯಾವ ದೃಷ್ಟಿಯಿಂದ ನೋಡಿದರೂ ಕೂಡ ಕರ್ನಾಟಕ ಸಂಗೀತ ದೇಶೀಯವಾದದ್ದು. ಅಮೀರ್ ಖುಸ್ರೂ ಮೊದಲಾದವರು ಬಂದ ನಂತರ ಹಿಂದೂಸ್ಥಾನಿ ಸಂಗೀತದಲ್ಲಿ ಮಿಶ್ರರಾಗಗಳ ಪ್ರಭಾವವಿದೆ. ಆ ಕಾರಣಕ್ಕಾಗಿ, ತಾವಾದರೂ ಕೂಡ ಈ ಸಾರ್ಕ್ ಸಮ್ಮೇಳನದಲ್ಲಿ, ಎಲ್ಲರಿಗೂ ಸಮಾನವಾದ ರೀತಿಯಲ್ಲಿ ಸಂಭಾವನೆಯನ್ನು ಕೊಡತಕ್ಕಂಥ ಕೆಲಸ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದರು.

ಇನ್ನು, ಡಾ|| ರಾಜಾರಾಮಣ್ಣನವರ ಬಗ್ಗೆ ಈಗಾಗಲೇ ಹೇಳಿದ್ದಾರೆ. ಈ ದೇಶದ ವೈಚಿತ್ರಗಳಲ್ಲಿ, ಒಬ್ಬ ವಿಜ್ಞಾನಿಯಾಗಿ ಅಲ್ಬರ್ಟ್ ಮ್ಯೂಸಿಕ್ ಹಾಲ್‌ನಲ್ಲಿ ಒಬ್ಬರು ಅತ್ಯುತ್ತಮ ಪಿಯಾನೋ ವಾದಕರಾಗಿದ್ದರು, ಡಾ|| ರಾಜಾರಾಮಣ್ಣನವರು. ಅವರು ಇಂಗ್ಲೆಂಡಿನಲ್ಲಿ ರಾಯಲ್ ಅಕಡೆಮಿ ಆಫ್ ಮ್ಯೂಸಿಕ್‌ನಲ್ಲಿ ಡಿಪ್ಲೊಮೊ ಪಡೆದಿರತಕ್ಕಂಥಾದ್ದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ಅವರು ಒಬ್ಬ ಒಳ್ಳೆಯ ಪಿಯಾನೋ ವಾದಕರು. ಅನೇಕ ಸಂದರ್ಭಗಳಲ್ಲಿ ಟಾಟಾ ಆಡಿಟೋರಿಯಂನಲ್ಲಿ ಆಗಿಂದಾಗ್ಗೆ ರಾಜಾರಾಮಣ್ಣನವರ ಪಿಯಾನೋ ವಾದನದ ವಿಚಾರದಲ್ಲಿ ಸಂಗೀತ ಗೋಷ್ಠಿಗಳು ನಡೆಯುತ್ತಿದ್ದವು. ಅವರು ಒಬ್ಬ ಅದ್ಭುತವಾದ ಸಂಗೀತಗಾರರು. " ನನ್ನ ಬದುಕು" ಎನ್ನುವುದು ಒಂದು ಅವರ ಸುಂದರವಾದ ಪುಸ್ತಕ, ಅದರಲ್ಲಿ ತಮ್ಮ ಆತ್ಮ ಚರಿತ್ರೆಯನ್ನು ಅವರು ಬರೆದಿದ್ದಾರೆ. ವಿಜ್ಞಾನಿಯಾಗಿದ್ದಂಥವರೂ ಕೂಡ ಸಂಗೀತದಲ್ಲಿ ತನ್ನನ್ನು ತಾನು ಮರೆಯಬಹುದು ಎಂದು ಹೇಳಿದ್ದಾರೆ. ಕೋಷನ್ ಹ್ಯಾಮರ್‌ರಂಥವರು, ಅವರು ಅಣುವಿಭಜನೆ ಮಾಡಿ ಆಟಂ ಬಾಂಬ್

ಹಾಕಿದಂಥ ಸಂದರ್ಭದಲ್ಲಿ, 'ಸೂರ್ಯಮೂರ್ತಿಗೆ ನಮೋ' ಎಂದು ನಮ್ಮ ಋದ್ವೇಗದಲ್ಲಿ ಪ್ರಸ್ತಾಪ ಮಾಡಿದಂತೆ, 'ಸಮಕೋಟಿ ಸೂರ್ಯಪ್ರಭಾ' ಎನ್ನುವಂಥಾದ್ದನ್ನು ಹ್ಯಾಮರ್‌ರವರು ಹೇಗೆ ಕೋಟ್ ಮಾಡುತ್ತಾರೋ, ಹಾಗೆಯೇ ಪೋಖ್ರಾನ್‌ನಲ್ಲಿ ಪರೀಕ್ಷೆ ಮಾಡಿದಾಗ, ಮಾನ್ಯ ರಾಜಾರಾಮಣ್ಣವರು ಆ ಋಗ್ವೇದದ ಘೋಷಣೆಯನ್ನು ಮಾಡಿರತಕ್ಕಂಥಾದ್ದನ್ನು ನಾವು ಕಂಡಿದ್ದೇವೆ. ಅಂದರೆ, ಸಂಸ್ಕೃತದಲ್ಲಿ, ವಿಜ್ಞಾನದಲ್ಲಿ, ಸಂಗೀತದಲ್ಲಿ, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪರಿಪೂರ್ಣನಾಗಿರತಕ್ಕಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡಾಗ, ಪ್ರಾಯಶಃ ನಿಸರ್ಗದ ಎಲ್ಲಾ ರಹಸ್ಯಗಳೂ ಅವರಿಗೆ ಬಯಲಾಗಲು ಸಾಧ್ಯವಾಗುತ್ತದೆ. ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸಸ್ ಎನ್ನುವ ನಮ್ಮ ಆವರಣ ಏನಿದೆ, ಅದರ ಹಿಂದೆ ಡಾ|| ರಾಜಾರಾಮಣ್ಣ. ಅವರು ತಮ್ಮದೇ ಆಗಿರತಕ್ಕಂಥ ಒಂದು ದೊಡ್ಡ ವಿಜ್ಞಾನ ಸಂಸ್ಥೆಯನ್ನು ಕಟ್ಟಿರತಕ್ಕಂಥವರಾಗಿದ್ದಾರೆ. ರಾಜ್ಯಸಭಾ ಸದಸ್ಯರಾಗಿ ಕನ್ನಡ ನಾಡಿಗೆ ಒಂದು ದೊಡ್ಡ ಸೇವೆಯನ್ನು ಕೊಟ್ಟಿದ್ದಾರೆ. ಅವರನ್ನು ನಾವು ನೆನೆಯುವ ಮೂಲಕವಾಗಿ, ಅವರು ಕನ್ನಡಿಗರು ಎಂದು ಹೆಮ್ಮೆ ಪಡುವ ಜೊತೆಗೆ ಅವರೊಬ್ಬ ಮಹಾನ್ ವಿಜ್ಞಾನಿಯಾಗಿದ್ದರು ಎಂದು ಹೇಳಬೇಕು.

ಇನ್ನು, ಸಾಗರನಹಳ್ಳಿ ರೇವಣ್ಣನವರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಅವರು ಎಷ್ಟು ಮುಗ್ಧರಾಗಿದ್ದರು ಎನ್ನುವುದಕ್ಕೆ, ಈ ಸಂತಾಪ ಸೂಚನೆ ಸಂದರ್ಭದಲ್ಲಿಯೂ ಒಂದು ಪ್ರಸಂಗವನ್ನು ಹೇಳುವುದಾದರೆ, ದಿವಂಗತ ಜೆ.ಹೆಚ್. ಪಟೇಲರ ಹಾಸ್ಯಪ್ರಜ್ಞೆ ಮತ್ತು ರೇವಣ್ಣನವರ ಮುಗ್ಧತೆ ಇವುಗಳ ಬಗ್ಗೆ ಹೇಳುವುದಾದರೆ, ರೇವಣ್ಣನವರು 1983ರಲ್ಲಿ ಮಂತ್ರಿಗಳಾಗಿದ್ದರು, ಆಗ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಸಚಿವ ಸಂಪುಟದ ಸಭೆಯಲ್ಲಿ ಊಟ ಉಪಹಾರಗಳನ್ನೂ ಇಡುತ್ತಿದ್ದರು. ಅದರಲ್ಲಿ ಮಾಂಸಾಹಾರಿ ಭೋಜನ ಕೂಡ ಇರುತ್ತಿತ್ತು. ಆಗ ಮಾನ್ಯ ಜೆ.ಹೆಚ್. ಪಾಟೇಲರು ಒಂದು ಬೇಯಿಸಿದ ಮೊಟ್ಟೆಯನ್ನು ಪ್ಲೇಟಿನಲ್ಲಿ ಇಟ್ಟುಕೊಂಡು ಅದನ್ನು ಒಡೆಯುತ್ತಿದ್ದರು. ಲಿಂಗಾಯಿತರಾದವರು ಕೋಳಿಮೊಟ್ಟೆಯನ್ನು ತಿನ್ನಬಾರದು ಎಂದು ರೇವಣ್ಣನವರು ಅಂದುಕೊಂಡು, ಜೆ.ಹೆಚ್. ಪಟೇಲರ ಹತ್ತಿರ ಬಂದು, 'ಸಾರ್, ಸಾರ್, ಇದು ಕೋಳಿಮೊಟ್ಟೆ ಸಾರ್' ಎಂದರು. ಆಗ ಪಟೇಲರು, 'ಬಿಡ್ರೀ, ಅವರ ಅವ್ವನ್ನೇ ಬಿಡುವುದಿಲ್ಲ ನಾವು ಇದೆಲ್ಲಾ ಏನು" ಎಂದರು. ಪಾಪ, ರೇವಣ್ಣನವರು ಎಷ್ಟು ಮುಗ್ಧರಿದ್ದರು ಎಂದರೆ, ಅದು ಅರ್ಥವಾಗದೇ, 'ಇಲ್ಲ ಸಾರ್, ಅದು ಕೋಳಿಮೊಟ್ಟೆ ಸಾರ್' ಎಂದರು. ಆಗ ಅವರಿಗೆ ರಾಮಕೃಷ್ಣ ಹೆಗಡೆಯವರು ಹೇಳಿದರು, ನೀವು ಅವರ ತಂಟೆಗೆ ಹೋಗಬೇಡಿ, ಅವರು ಏನಾದರೂ ತಿನ್ನಲಿ, ನೀವು ತಿನ್ನುವುದನ್ನು ಮಾತ್ರ ನೀವು ತಿನ್ನಿ, ಎಂದು ಹೇಳಿದರು. ಆ ರೀತಿ ಮುಗ್ಧರಾಗಿದ್ದಂಥವರು ಅವರು, ಈಗಾಗಲೇ ಮಾಧುಸ್ವಾಮಿಯವರು ಆ ವಿಚಾರವನ್ನು ಹೇಳಿದ್ದಾರೆ. ಈ ಭಾಗದಲ್ಲಿ ಬಹಳ ಪ್ರಸಿದ್ಧರಾದಂಥವರು ಅವರು. ಅದರಲ್ಲೂ ಸಹಕಾರಿ ಆಂದೋಲನದಲ್ಲಿ ಹೆಸರುವಾಸಿಯಾದವರು. ಅವರು ಮಾರ್ಕೆಟಿಂಗ್ ಫೆಡರೇಷನ್ನಿನಲ್ಲಿ ನಿರಂತರವಾಗಿ ಡೈರೆಕ್ಟರ್ ಆಗಿದ್ದರು. ಯಾರನ್ನೋ ಡೈರೆಕ್ಟರ್ ಮಾಡಲಿಕ್ಕಾಗಿ ಅವರು ನಮ್ಮ ಊರುಗಳಿಗೆ ಬರುತ್ತಿದ್ದರು, ಇಂಥವರಿಗೆ ಓಟು ಕೊಡಿಸಿ ಎಂದು ಕೇಳುತ್ತಿದ್ದರು. ಇಷ್ಟು ಮುಗ್ಧರಾಗಿರತಕ್ಕಂಥವರಾಗಿದ್ದರು ಅವರು.

ಇನ್ನು, ಮಾನ್ಯ ಶಂಕರ ಮೊಕಾಶಿ ಪುಣೇಕರ್‌ರವರು ಅತ್ಯುತ್ತಮವಾಗಿರತಕ್ಕಂಥ ಒಬ್ಬ ಸಾಹಿತಿಯಾಗಿದ್ದರು. ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡಮಿಗಳ ಗೌರವ ಪುರಸ್ಕಾರ ಪಡೆದಿದ್ದಂಥ ಒಬ್ಬ ಮಹಾನ್ ಸಾಹಿತಿಯಾಗಿದ್ದರು. ಅವರ "ಅವಧೇಶ್ವರಿ" ಕೃತಿಯು, ವೇದಕಾಲೀನ ಸ್ತ್ರೀಯರ

ಬಗ್ಗೆ ಬರೆದಿರತಕ್ಕಂಥಾದ್ದು, ವೇದಕಾಲೀನ ಜನಜೀವನದ ಬಗ್ಗೆ ಬರೆದಿರತಕ್ಕಂಥಾದ್ದು ಇದೆ. 'ಅವಧೇಶ್ವರಿ'ಯಲ್ಲಿ ರಾಮಾಯಣದ ವಿಚಾರದಲ್ಲಿ ಇವತ್ತಿನವರೆಗೆ ಬಂದಿರತಕ್ಕಂಥ ಸಂಶೋಧನೆಗಳಲ್ಲಿ, ನನಗೆ ತಿಳಿದ ಮಟ್ಟಿಗೆ ಶ್ರೀರಾಮಚಂದ್ರನ ಹಿಂದಿನ 42 ವಂಶಗಳ ವಿಚಾರವನ್ನೂ ಕೂಡ ಪ್ರಸ್ತಾಪ ಮಾಡುತ್ತಾರೆ. ಶ್ರೀರಾಮಚಂದ್ರನ ಹಿಂದೆ ಇರತಕ್ಕಂಥ 42 ವಂಶದ ಮೊದಲನೆಯವರು ಪುರಕುಸ್ತಾನ ಮತ್ತು ಪುರಕುಸ್ತಾನಿ ಎನ್ನುವವರು. ಆಗ ತನ್ನ ಸ್ವಂತ ತಂಗಿಯನ್ನೇ ಮದುವೆ ಯಾಗತಕ್ಕಂಥ ಪದ್ಧತಿಯಿತ್ತು. ಪ್ರಾಯಶಃ ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ತಪ್ಪು ತಿಳಿದುಕೊಳ್ಳಬಾರದು. ಶ್ರೀರಾಮಚಂದ್ರರ ಹಿಂದಿನ ಕಾಲದಲ್ಲಿ, ಅದು ಆಸ್ತಿ ಹೊರಗಡೆಗೆ ಹೋಗಬಾರದು ಎನ್ನುವ ಕಾರಣ ಇರಬಹುದು ಅಥವಾ ಋತುನಷ್ಟವಾಗಬಾರದು ಎನ್ನುವ ಪರಿಕಲ್ಪನೆಯಲ್ಲಿ, ಜನಸಂಖ್ಯಾ ಸ್ಫೋಟಕ್ಕೆ ಸಂಬಂಧಪಟ್ಟಂತೆ ಆತನ ಹಿಂದಿನ 42ನೇ ವಂಶಾವಳಿಯ ವಿಚಾರವಾಗಿ 'ಅವಧೇಶ್ವರಿ'ಯಲ್ಲಿ ಪ್ರಸ್ತಾಪ ಮಾಡುತ್ತಾ, ಪುರಕುಸ್ತಾನ ಮತ್ತು ಪುರಕುಸ್ತಾನಿಯವರ ತಂಗಿಯನ್ನೇ ಮದುವೆಯಾದಂಥ ವಂಶಕ್ಕೆ ಸೇರಿದಂಥ ಶ್ರೀರಾಮಚಂದ್ರನ ವಿಚಾರದಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ಒಬ್ಬರು ಒಳ್ಳೆಯ ಹಿರಿಯ ಲೇಖಕರೂ ಕೂಡ ಇವರಾಗಿದ್ದರು. "ಗಂಗಮ್ಮ-ಗಂಗಾಮಾಯಿ" ಒಂದು ಉತ್ತಮವಾದ ಕೃತಿ. ಇದು ಒಂದು ಉತ್ತಮವಾದಂಥ ಸಿನಿಮಾವಾಗಿದ್ದು, ಅದರಿಂದ ಜಯಮಾಲಾರವರಿಗೆ ಒಂದು ದೊಡ್ಡ ಪ್ರಶಸ್ತಿ ಬಂದಿರತಕ್ಕಂಥಾದ್ದು ತಮಗೆಲ್ಲಾ ಗೊತ್ತಿರತಕ್ಕಂಥ ವಿಷಯವೇ.

ಇನ್ನು, ಸುನಾಮಿ ದುರಂತದ ವಿಚಾರದಲ್ಲಿ ಅನೇಕರು ಸಂತಾಪವನ್ನು ವ್ಯಕ್ತಮಾಡಿರತಕ್ಕಂಥಾದ್ದು ನಿಜ. ಪಾಪದ ಕಾರಣಕ್ಕಾಗಿ ಇದು ಆಗುತ್ತದೆ ಎಂದು ನಾನೇನೂ ಭಾವಿಸುವುದಿಲ್ಲ. ನಿಸರ್ಗದಲ್ಲಿ ಸದಾಕಾಲ ಇಂಥ ಪ್ರಕ್ರಿಯೆಗಳು ನಡೆದೇ ನಡೆಯುತ್ತವೆ. ಅವುಗಳನ್ನು ಒಂದೊಂದು ಸಂದರ್ಭದಲ್ಲಿ ನಾವು ಅರ್ಥೈಸಿಕೊಳ್ಳುವಂಥ ರೀತಿಯ ಮೇಲೆ ಹೋಗುತ್ತದೆ. ಪಂಪಾಯಿ ಆದಂಥ ಸಂದರ್ಭದಲ್ಲಿ ನಾವು ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಅಥವಾ ನಮಗೆ ತಾರ್ಕಿಕವಾಗಿ ಉತ್ತರ ಕೊಡಲು ಸಾಧ್ಯವಿಲ್ಲದಿರುವಂಥ ಪರಿಸ್ಥಿತಿಯಲ್ಲಿ, ಪ್ರಾಯಶಃ ನಾವು ತಪ್ಪು ಮಾಡಿರುವ ಕಾರಣಕ್ಕಾಗಿ ದೇವರು ಇಂಥ ಶಿಕ್ಷೆಯನ್ನು ಕೊಟ್ಟಿರಬಹುದು ಎಂದುಕೊಳ್ಳುತ್ತೇವೆ. ಆದರೆ, ಅದು ಪ್ರಕೃತಿಯಲ್ಲಿ, ವ್ಯೋಮದಲ್ಲಿ ನಡೆಯತಕ್ಕಂಥ, ಈ ಜಗತ್ತಿನ ಚರಾಚರ ಶಕ್ತಿಗಳ ನಡುವೆ ಇಲ್ಲಿ ಅಲ್ಲಿ ಆಗತಕ್ಕಂಥಾದ್ದು, ಅದು ಭೂಗರ್ಭದಲ್ಲಿ ನಡೆಯತಕ್ಕಂಥ ಒಂದು ಸ್ಫೋಟವೇ ಆಗಿರಲಿ ಅಥವಾ ಜಲಪ್ರಳಯವೇ ಆಗಿರಲಿ, ಅದನ್ನು ನಮ್ಮನಮ್ಮ ಮನಸ್ಸಿಗೆ, ಸಾಪೇಕ್ಷೆಗೆ ಅನುಗುಣವಾದಂಥ ರೀತಿಯಲ್ಲಿ ಅರ್ಥೈಸಿಕೊಂಡಿದ್ದರೂ ಕೂಡ ಇದು ನಿಸರ್ಗದಲ್ಲಿ ನಡೆಯಲೇಬೇಕಾಗಿರತಕ್ಕಂಥಾದ್ದು. ಒಟ್ಟಿನಲ್ಲಿ, ನಾವು ಇದರಿಂದ ಕಲಿಯಬೇಕಾಗಿರತಕ್ಕಂಥ ಒಂದು ಪಾಠವೆಂದರೆ, ಈ ಜಗತ್ತಿನಲ್ಲಿ ಮನುಷ್ಯನಿಗೆ ದುಃಖ ಶಾಶ್ವತವಾಗಿರತಕ್ಕಂಥಾದ್ದು ಎನ್ನುವುದು. ಅದನ್ನೇ ಬುದ್ಧ, ಬೋಧಿಸತ್ವನಾಗುವಂಥ ಸಂದರ್ಭದಲ್ಲಿ ಕಂಡುಕೊಂಡಂಥಾದ್ದು. ಮನುಷ್ಯನ ಜನನ ನಿಶ್ಚಿತವೋ, ಹಾಗೆಯೇ ದುಃಖವೂ ಕೂಡ ಅಷ್ಟೇ ನಿಶ್ಚಿತವಾಗಿರುತ್ತದೆ. ಅಗಲುವಿಕೆ ದುಃಖವಾಗುತ್ತದೆ. ಆದರೆ ಈ ದುಃಖ ಅವನ ಕಾರಣಕ್ಕಾಗಿ ಅಲ್ಲ, ನಿಸರ್ಗದ ನಿಯಮಾನಿಯಮಗಳ, ಕಾರಣಕಾರಣಗಳಿಗಾಗಿ ಆಗಿರತಕ್ಕಂಥಾದ್ದೂ ಕುಡ ಆಗಿರುತ್ತದೆ. ಆ ಕಾರಣಕ್ಕಾಗಿ, ಇಂಥ ಒಂದು ದೊಡ್ಡ ದುರಂತ ಸಂಭವಿಸಿರುವ ಸನ್ನಿವೇಶದಲ್ಲಿ ನಾವು ಎಷ್ಟು ಚಿಕ್ಕವರು, ನಾವು ಈ ಜಗತ್ತಿನಲ್ಲಿ ಅಥವಾ ಈ ವ್ಯೋಮದಲ್ಲಿ ಎಷ್ಟು ಕ್ಷುದ್ರಜೀವಿಗಳು ಎನ್ನುವುದನ್ನು ಕಂಡುಹಿಡಿಯಬೇಕಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಇಂಥ

ವಿಚಾರವನ್ನು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ, ದಿವಂಗತ ಜೆ.ಹೆಚ್. ಪಟೇಲರು ಹಿಂದೆ ಇದೇ ಸದನದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದುದ್ದನ್ನು ಹೇಳಿದರು. ರೋಸೆವೆಲ್ಟ್‌ರವರು ಕ್ರಿಪಲ್ಡ್ ಆದಾಗ, ಅವರ ಕಾಲುಗಳು ಇಲ್ಲದೇ ಇದ್ದಂಥ ಸಂದರ್ಭದಲ್ಲಿ ಅವರು ಯಾವಾಗಲೂ ತಮ್ಮ ಶ್ವೇತ ಭವನದ ಮೇಲೆ ಕುಳಿತುಕೊಂಡು ಈ ಬಾಂದಳವನ್ನು ಸದಾಕಾಲ ವೀಕ್ಷಿಸುತ್ತಾ ಇದ್ದಂಥ ಸನ್ನಿವೇಶದಲ್ಲಿ, ಅಷ್ಟೇ ಪ್ರಖ್ಯಾತರಾದಂಥ ಅವರ ಹೆಂಡತಿ ಎಲಿನಾರವರು ಬಂದು, ಅವರಿಗೆ ಹೀಗೆ ಪ್ರಶ್ನೆಯನ್ನು ಮಾಡುತ್ತಾರೆ ನೀವು ಸದಾಕಾಲವೂ ಬರೀ ಆಕಾಶದ ನಕ್ಷತ್ರಗಳನ್ನು ನೋಡುತ್ತಲೇ ಇರುತ್ತೀರಿ, ತಾವೇನು ಖಗೋಳ ಶಾಸ್ತ್ರಜ್ಞರೋ ಅಥವಾ ಅಮೇರಿಕಾ ದೇಶದ ಅಧ್ಯಕ್ಷರೋ ಎಂದು ಕೇಳಿದಂಥ ಸನ್ನಿವೇಶದಲ್ಲಿ ರೋಸ್‌ವೆಲ್ಟ್‌ರವರು ಹೇಳುತ್ತಾರಂತೆ, ಈ ಬಾಂದಳದಲ್ಲಿ ಕೋಟಿ ಕೋಟಿ ಮಿಲಿಯನ್‌ಗಳಷ್ಟಿರುವ ನಕ್ಷತ್ರಗಳ ಪುಂಜಗಳಿವೆ. ಅಲ್ಲಿರುವಂಥ ಆಕಾಶಕಾಯಗಳ ವಿಚಿತ್ರವನ್ನು ನಾವು ನೋಡುತ್ತಿದ್ದರೆ, ಅದರಲ್ಲಿ ಸಣ್ಣದಾಗಿರುವಂಥ ಮತ್ತು ಇತ್ತೀಚೆಗೆ ಹುಟ್ಟಿರುವಂಥ ಕಡಿಮೆ ವಯಸ್ಸಿನ ಒಂದು ಗ್ರಹವೆಂದರೆ ಅದು ಭೂಮಿ, ಪೃಥ್ವಿ. ಈ ಪೃಥ್ವಿಯಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನ ಎನ್ನುವಂಥಾದ್ದು ಒಂದು ಚಿಕ್ಕ ದೇಶ. ಆ ಚಿಕ್ಕದೇಶದಲ್ಲಿ ನಾನೊಬ್ಬ ಹುಲುಮಾನವ, ಒಬ್ಬ ಅಧ್ಯಕ್ಷ ಆದ್ದರಿಂದ, ನನ್ನ ಈ ಅಧಿಕಾರ, ಈ ಅಮೇರಿಕಾ ದೇಶದ ಐಶ್ವರ್ಯ, ಎರಡನೇ ಜಾಗತಿಕ ಯುದ್ಧವನ್ನು ನಾವು ಗೆದ್ದೆವು ಎನ್ನುವ ಅಹಂಕಾರ ಕೂಡ ಬರದೇ, ಈ ವ್ಯೋಮದ ವ್ಯವಸ್ಥೆಯಲ್ಲಿ ನಾವೆಷ್ಟು ಚಿಕ್ಕವರು ಎಂದು ಅರ್ಥಮಾಡಿಕೊಂಡರೆ, ಪ್ರಾಯಶಃ ಈ ಬದುಕು ನಮಗೆ ಹಸನಾಗಬಹುದು ಎನ್ನುವಂಥ ರೀತಿಯಲ್ಲಿ ಉತ್ತರ ಕೊಟ್ಟಿದ್ದರು ಎಂದು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಉತ್ತರ ಕೊಟ್ಟಿದ್ದರು. ಇಲ್ಲಿ ಅಧಿಕಾರದ ವಿಚಾರದಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಆದ್ದರಿಂದ ಸುನಾಮಿ ಅನ್ನತಕ್ಕಂಥಾದ್ದು, ನಮ್ಮ ಬದುಕಿನಲ್ಲಿ, ಅದು ಸುನಾಮಿಯಾಗಿರಬಹುದು ಅಥವಾ ಇನ್ನೊಂದೇ ಆಗಿರಬಹುದು, ಒಟ್ಟಿನಲ್ಲಿ ಅತ್ಯಂತ ನಿಜವಾಗಿ ನಡೆಯತಕ್ಕಂಥ ಈ ಕಾರ್ಯಕ್ರಮಗಳಲ್ಲಿ ನಾವು ಅಗಲುವಿಕೆಯನ್ನುವ ದುಃಖ ಮತ್ತು ಇದರ ಮೂಲಕವಾಗಿ ಪ್ರಕೃತಿಯನ್ನು ಜಯಿಸುತ್ತೇವೆ ಎನ್ನುವಂಥ ಮನುಷ್ಯನ ಅಹಂಕಾರ ಏನಿದೆ, ಅದಕ್ಕೆ ಇಂಥಾದ್ದು ಸರಿಯಾದ ಉತ್ತರ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಎಲ್ಲರಿಗೂ ಸಂತಾಪವನ್ನು ವ್ಯಕ್ತಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ, ಅವರೆಲ್ಲರ ಕುಟುಂಬಕ್ಕೆ ದೇವರು ಶಾಂತಿ-ನೆಮ್ಮದಿಯನ್ನು ಕೊಡಲಿ ಎನ್ನುವಂಥ ಮಾತನ್ನು ಹೇಳಿ, ಸದನದ ಎಲ್ಲ ಸದಸ್ಯರ ಜೊತೆಗೆ ನಾನೂ ಕೂಡ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ ಎಂದು ಹೇಳುತ್ತಾ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:-** ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

**ಅಧ್ಯಕ್ಷರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು.